ಅನುಭವಮಂಟಪ ಶರಣಚರಿತಾಮೃತ ಮಾಲಿಕೆ-೩೭ (೨೦೨೩)

ಭವರಹಿತ ಧೂಪದ ಗೊಗ್ಗವ್ವೆ



ಜಯಶ್ರೀ ಸುಕಾಲೆ

ಅನುಭವಮಂಟಪ ಚರಿತಾಮೃತ ಮಾಲೆ ೩೬ - ೨೦೨೩

ಭವರಹಿತ ಧೂಪದ ಗೊಗ್ಗವ್ವೆ

ಲೇಖಕರು
ಶ್ರೀಮತಿ ಜಯಶ್ರೀ ಸುಕಾಲೆ

ಪ್ರಕಾಶಕರು
ಪ್ರಸಾರಾಂಗ ಲಿಂಗಾಯತ ವಿಶ್ವವಿದ್ಯಾಲಯ
ಅನುಭವಮಂಟಪ, ಬಸವಕಲ್ಯಾಣ ಜಿಲ್ಲೆ ಬೀದರ

Bhavarahita Dhupada Goggavve

Writer	:	Smt. Jayashree Sukale 'Basava Prakasha Nilaya' Shrana Nagar, Bidar-585401 9481633463
Publisher	:	Prasaranga, Lingayat Vishwavidyalaya Anubhava Mantapa, Basavakalyana, Dist: Bidar
First Edition	:	2023
©	:	Authors
Copies	:	1000
Pages	:	vi + 42 = 48
Price	:	**Rs. 50/-**
Book Size	:	Crown 1/8
Paper Used	:	70 GSM N. S. Maplitho

ಭವರಹಿತ ಧೂಪದ ಗೊಗ್ಗವ್ವೆ

ಲೇಖಕರು	:	ಶ್ರೀಮತಿ ಜಯಶ್ರೀ ಸುಕಾಲೆ
ಪ್ರಕಾಶಕರು	:	ಪ್ರಸಾರಾಂಗ, ಲಿಂಗಾಯತ ವಿಶ್ವವಿದ್ಯಾಲಯ, ಅನುಭವ ಮಂಟಪ, ಬಸವಕಲ್ಯಾಣ ಜಿಲ್ಲೆ ಬೀದರ
ಮೊದಲ ಮುದ್ರಣ	:	೨೦೨೩
ಹಕ್ಕುಗಳು	:	ಲೇಖಕರವು
ಪ್ರತಿಗಳು	:	೧೦೦೦
ಪುಟಗಳು	:	vi + ೪೨ = ೪೮
ಬೆಲೆ	:	ರೂ. ೫೦/-
ಪುಸ್ತಕದ ಆಕಾರ	:	ಕ್ರೌನ್ ೧/೮
ಬಳಸಿದ ಕಾಗದ	:	೭೦ ಜಿ.ಎಸ್.ಎಮ್. ಎನ್.ಎಸ್.ಮ್ಯಾಪಲಿಥೋ

ಮುದ್ರಕರು :

ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ವಿಠ್ಠಲ ಮಂದಿರ ರೋಡ, ಗದಗ – 582 101
Email : chaitanyaoffset@gmail.com
Mobile : 8884195331, 9448223602,

ಪ್ರಕಾಶಕರ ನುಡಿ

೧೨ನೆಯ ಶತಮಾನದ ಅನುಭವ ಮಂಟಪ, ಅದರ ಕರ್ತೃ ಬಸವಣ್ಣನವರು. ನೂತನ ಅನುಭವ ಮಂಟಪದ ರೂವಾರಿಗಳು ಭಾಲ್ಕಿ ಹಿರೇಮಠದ ಡಾ.ಚನ್ನಬಸವ ಪಟ್ಟದ್ದೇವರು. ಬಸವಾದಿ ಶರಣರ ಮಣಿಹ ಹೊತ್ತ ಪೂಜ್ಯರು, ಜನಪರ, ಜೀವಪರ ಕಾಳಜಿಗಳೊಂದಿಗೆ ವೈಚಾರಿಕ ನೆಲೆಯಲ್ಲಿ ಸಾಂಸ್ಕೃತಿಕ ಕೆಲಸ ಕಾರ್ಯಗಳನ್ನು ಜೊತೆಯಲ್ಲಿಯೇ ಪೂರೈಸುತ್ತಿದ್ದರು. ಅದರ ಭಾಗವಾಗಿಯೇ ಕಲೆ, ಸಮಾಜ, ಸಂಸ್ಕೃತಿ ಮತ್ತು ಸಾಹಿತ್ಯದ ಅಧ್ಯಯನ ಪ್ರಸಾರ ಪ್ರಕಟಣೆಗಳು ಈಗಲೂ ಜರುಗುತ್ತವೆ.

೨೦೧೪ರ ಬಸವ ಜಯಂತಿ ಸಂದರ್ಭದಲ್ಲಿ ವಿಶ್ವಬಸವಧರ್ಮ ಟ್ರಸ್ಟ್ ಅನುಭವ ಮಂಟಪ ಬಸವಕಲ್ಯಾಣದ ಅಧ್ಯಕ್ಷರಾಗಿ ಪೂಜ್ಯ ಡಾ. ಬಸವಲಿಂಗ ಪಟ್ಟದ್ದೇವರು ಅಧಿಕಾರ ವಹಿಸಿಕೊಂಡರು. ಅನುಭವ ಮಂಟಪದಲ್ಲಿ ನಿತ್ಯ ಜ್ಞಾನದಾಸೋಹ ವ್ಯವಸ್ಥಿತವಾಗಿ ನಡೆಯಬೇಕೆಂಬ ಉದ್ದೇಶದಿಂದ ಆ ಕಾರ್ಯ ಆರಂಭಿಸಿದರು. ಜೊತೆಗೆ ಸಾಹಿತ್ಯ ಕೃತಿಗಳನ್ನು ಪ್ರಕಟಿಸಲು ಪ್ರಕಾಶನ ಸಂಸ್ಥೆಯನ್ನು ತೆರೆಯಲು ಯೋಜನೆ ರೂಪಿಸಿದರು. ಇದಕ್ಕೆ ಮುಖ್ಯ ಕಾರಣವೆಂದರೆ, ಆಧುನಿಕತೆಯ ಭರಾಟೆಯಲ್ಲಿ "ಪುಸ್ತಕ ಸಂಸ್ಕೃತಿ" ಮಾಯವಾಗುತ್ತಿದೆ. ಅದನ್ನು ಉಳಿಸಿಕೊಳ್ಳಬೇಕೆಂಬ ಬಲವಾದ ಆಶಯ ಅವರದು. ಪುಸ್ತಕ ಪ್ರೇಮಿಗಳೆಲ್ಲರ ಆಶಯವು ಇದೆ ಆಗಿದೆ. ಪುಸ್ತಕವೆಂದರೆ ಕೇವಲ ಹಾಳೆಗಳ ಕಟ್ಟಲ್ಲ. ನಮ್ಮ ಸಾಂಸ್ಕೃತಿಕ ಲೋಕವನ್ನು ಬೆಸೆಯುವ, ನಮ್ಮ ಜ್ಞಾನದ ಪರಿಧಿಯನ್ನು ವಿಸ್ತರಿಸುವ ವಾಹಕ ಅದಾಗಿದೆ. ಮೂಲ ಲೇಖಕನೊಂದಿಗೆ ನಡೆಸುವ ಸಂವಾದವೂ ಅದು ಆಗಿರುತ್ತದೆ. ಜೊತೆಗೆ ಸಮಕಾಲೀನ ಬದುಕಿನ ಅನೇಕ ಆಯಾಮಗಳನ್ನು ಕಟ್ಟಿಕೊಡುವ ಸರಕಾಗಿರುತ್ತದೆ. ಶ್ರೀಗಳ ಆಶಯದಂತೆ ಶರಣರ ಶುದ್ಧ ಚಾರಿತ್ರಿಕ ಜೀವನ

ಜನಸಾಮಾನ್ಯರಿಗೂ ತಿಳಿಯಬೇಕೆಂಬ ಹೆಬ್ಬಯಕೆಯಿಂದ ೨೦೧೬ರಲ್ಲಿ 'ಅನುಭವ ಮಂಟಪ ಶರಣ ಚರಿತಾಮೃತ ಮಾಲಿಕೆ'ಯನ್ನು ರೂಪಿಸಿಕೊಂಡು, ಅದರ ಹೆಸರಿನಲ್ಲಿ ೬೪ ಪುಟದ ವ್ಯಾಪ್ತಿಯ ಶರಣ ಸಾಹಿತ್ಯ ಕುರಿತಾದ ಮೌಲಿಕ ಕೃತಿಗಳನ್ನು ಹೊರತರುವ ಇಚ್ಛೆ ಹೊಂದಲಾಗಿದೆ.

ಈಗಾಗಲೇ ಇದರಡಿಯಲ್ಲಿ ೩೮ ಪುಸ್ತಕಗಳು ಶರಣರ ಚರಿತ್ರೆಗಳನ್ನು ಒಳಗೊಂಡು ಹೊರತರಲಾಗಿದ್ದು, ಈಗ **ಶೀಲವಂತ ಶರಣ ಏಲೇಶ್ವರ ಕೇತಯ್ಯ, ಧರ್ಮ ರಕ್ಷಕಿ ದಾನಮ್ಮ, ಭವರಹಿತ ದೂಪದ ಗೊಗ್ಗವ್ವೆ ಹಾಗೂ ಮೇದಾರ ಕೇತಯ್ಯ** ಎಂಬ ಕೃತಿಗಳನ್ನು ಈ ವರ್ಷದಲ್ಲಿ ಲೋಕಾರ್ಪಣೆ ಮಾಡಲು ಸಂತೋಷವೆನಿಸುತ್ತದೆ. ಈ ಪುಸ್ತಕಗಳನ್ನು ಬರೆದುಕೊಟ್ಟ ಎಲ್ಲಾ ಲೇಖಕರಿಗೆ ಅನಂತ ಶರಣಾರ್ಥಿಗಳು ಮತ್ತು ಪುಸ್ತಕ ದಾಸೋಹಿಗಳಾದಂತ **ಆಯುಕ್ತರು** ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ಅವರಿಗೂ ಅನಂತ ಶರಣಾರ್ಥಿಗಳು.

–ಪ್ರಕಾಶಕರು

ಪರಿವಿಡಿ

❖

ಭವರಹಿತ ಧೂಪದ ಗೊಗ್ಗವ್ವೆ

ಪೀಠಿಕೆ

ಹನ್ನೆರಡನೆಯ ಶತಮಾನದಲ್ಲಿ ಬಸವಾದಿಶರಣರು ಮಾನವ ಜೀವಕ್ಕೆ ಹೊಸ ಮೌಲ್ಯಗಳನ್ನು ಬರೆಸಿದರು. ಬಸವಣ್ಣನವರ ನೇತೃತ್ವದಲ್ಲಿ ನಡೆದ ಅಂದಿನ ಚಳವಳಿ ಮೂಲತಃ ಸಾಮಾಜಿಕ ಕ್ರಾಂತಿಯಾಗಿತ್ತು. ಲಿಂಗವಂತ ಧರ್ಮವನ್ನು ಶರಣತತ್ತ್ವವನ್ನು ಜನ ಸಾಮಾನ್ಯರ ಕಡೆಗೆ ಕೊಂಡ್ಯೊಯ್ದು ಹೊಸ ಸಮಾಜ ಕಟ್ಟಲು ಕಂಕಣಬದ್ಧರಾಗಿ ನಿಂತ ಬಸವಣ್ಣನವರಿಗೆ ಸಮಸ್ಯೆಗಳ ಸಾಗರವೇ ಎದುರಾದವು. ವಿವಿಧ ಸ್ವರೂಪದಲ್ಲಿ ನಡೆಯುತಿದ್ದ ಶೋಷಣೆಗಳಿಂದ ಸಮಾಜ ಮುಕ್ತವಾಗದ ಹೊರತು, ಹೊಸತನದತ್ತ ಸಾಗುವುದಾದರೂ ಹೇಗೆ? ಆದ್ದರಿಂದ ಬಸವಣ್ಣನವರು ಶೋಷಣೆಗಳ ಬೇರನ್ನೆ ಕತ್ತರಿಸುವ ಕೆಲಸಕ್ಕೆ ಕೈಹಾಕಿದರು. ಬದುಕಿನ ವಾಸ್ತವತೆಗೆ ದೂರಾಗಿ ಕಂಡರಿಯದ ಆಸೆ-ಆಮಿಷಗಳನ್ನು ನಂಬುವಂತೆ ಮಾಡಿದ ವೈದಿಕಧರ್ಮವನ್ನು ನಂಬಿದ್ದ ಮುಗ್ಧ ಮನಸ್ಸುಗಳಿಗೆ ಅರ್ಥಹೀನ ಕರ್ಮಠ ಅಚರಣೆಗಳ ಹಿಡಿತಕ್ಕೆ ಸಿಕ್ಕು ನಿಸ್ಸತ್ವವಾಗಿದ್ದ ವೈದಿಕಧರ್ಮದ ಒಳಗುಟ್ಟನ್ನು ಬಿಚ್ಚಿಸಿ, ಜನರನ್ನು ಸತ್ಯತೆಯ ಅರಿವೆಂಬ ವಿದ್ಯುತ್ಸ್ಪರ್ಶ ನೀಡಿದರು. ಆಗ ಸ್ವಾತಂತ್ರ್ಯವಾಗಿ ವಿಚಾರ ಮಾಡುವ ಶಕ್ತಿ ಜನರಿಗೆ ದೊರಕಿತು. ಜೊಳ್ಳು ಸಂಪ್ರದಾಯಗಳು ಮರೆಯಾದವು. ದೇವರು ಧರ್ಮದ ನಿಜವಾದ ಸ್ವರೂಪವನ್ನು ಶರಣರು ಜನರ ಮುಂದಿಟ್ಟರು. ಸ್ವರ್ಗ, ನರಕ, ಕರ್ಮ, ಪುಣ್ಯ, ಪಾಪ, ಕೈಲಾಸ, ವೈಕುಂಠ ಮುಂತಾದವುಗಳ ಅಸಂಗತ ಕಲ್ಪನೆಗೆ

ಶರಣರು ತೆರೆ ಎಳೆದರು. ಜನರಲ್ಲಿ ಹೊಸ ಶಕ್ತಿ ಸಂಚಾರವಾಯಿತು. ಹೊಸ ನಿಟ್ಟಿನಿಂದ ಅವರು ಚಿಂತನೆ ಮಾಡಲು ಪ್ರಾರಂಭಿಸಿದರು. ಅವರ ಚಿಂತನೆಯ ಫಲವೆಂಬಂತೆ ವಚನಗಳು ಮೂಡಿಬಂದವು. ಆ ವಚನಗಳಲ್ಲಿ ಮನುಷ್ಯರು ಸಮರ್ಥವಾಗಿ ಬದುಕುವ ಸ್ಪಷ್ಟವಾದ ಚಿತ್ರಗಳಿವೆ.

ಮನುಷ್ಯ ಜೀವನ ಸಂಕೀರ್ಣವಾದುದು; ನಮ್ಮ ಮತ ಧರ್ಮಗಳು, ಶಾಸ್ತ್ರಗಳು, ಸಂಪ್ರದಾಯಗಳು, ನಂಬುಗೆಗಳು, ದೈವಗಳೂ, ಪರಿಸರ, ಪ್ರಕೃತಿ, ಸಮಾಜ ಈ ಸಂಕೀರ್ಣತೆಯನ್ನು ಇನ್ನಷ್ಟು ಹೆಚ್ಚಿಸುತ್ತಿವೆ. ಈ ಸುಳಿವಿನ ಸೆಳೆತದಿಂದ ಮನುಷ್ಯ ಮೇಲೆಳಲು ಅವಕಾಶವಿಲ್ಲದಂತಾಗಿದೆ. ಅಂತೆಯೇ ಅವನು ಸ್ವಂತಿಕೆಯನ್ನು ಕಳೆದುಕೊಂಡು ಮತ, ಧರ್ಮ, ಶಾಸ್ತ್ರ, ಸಂಪ್ರದಾಯ, ದೈವ ಎಂಬ ನಂಬುಗೆಗಳಲ್ಲಿ ಹರಿದು ಹಂಚಿಹೋಗಿದ್ದಾನೆ. ಧರ್ಮ, ದೇವರು, ಶಾಸ್ತ್ರಗಳ ಹೆಸರು ಮುಂದೆ ಮಾಡಿ 'ಬುದ್ಧಿವಂತ' ಎನಿಸಿಕೊಳ್ಳುವ ಕೆಲವು ಜನರು ತಮ್ಮ ಮೂಗಿನ ನೇರಕ್ಕೆ ಎಲ್ಲವನ್ನು ಅರ್ಥಯಿಸಿ ಸಮಾಜದ ಬಹುಭಾಗವನ್ನು ಅಜ್ಞಾನದಲ್ಲಿಟ್ಟು ಆಳ್ವಿಕೆ ನಡೆಸುತ್ತಿರುವುದು ಇಂದಿಗೂ ಪ್ರಸ್ತುತದಲ್ಲಿದೆ ಎಂದರೆ ತಪ್ಪಾಗಿಕ್ಕಿಲ್ಲ ಎನಿಸುತ್ತದೆ. ಸಾಮಾಜಿಕ ಸಮತೋಲನಕ್ಕೆ ನೀತಿ ಪಾಲನೆ ಅನಿವಾರ್ಯ, ದ್ವೇಷಾಸೂಯೆ, ಕ್ರೋಧ, ಕುಟಿಲತೆಗಳು, ಆಶೆ–ಆಮಿಷಗಳು ಸಮಾಜ ಕ್ಷೋಭೆಗೆ ಕಾರಣವಾಗುತ್ತದೆ.

ಬಸವಣ್ಣನವರ ವಚನವಾಣಿಯಂತೆ "ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ, ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ" ಸಂದೇಶವನ್ನು ಪ್ರಾಮಾಣಿಕವಾಗಿ ಪಾಲಿಸುವುದಾದರೆ ಸಮಾಜದಲ್ಲಿ ಏಕೆ ಇಡೀ ಲೋಕದಲ್ಲಿಯೇ ವೈರತ್ವ–ಕ್ರೋಧಗಳು ನಾಶವಾಗಿ, ಸುಖ–ಶಾಂತಿಗಳು ತಾಂಡವವಾಡುತ್ತವೆ. "ಆಶೆಯೇ ದುಖಕ್ಕೆ ಮೂಲ" ಎಂಬ ಬುದ್ದನ ಮಾತು ಕೇವಲ ವ್ಯಕ್ತಿಗೆ ಮಾತ್ರವಲ್ಲ, ಕುಟುಂಬ, ಸಮಾಜ, ರಾಷ್ಟ್ರಗಳಿಗೂ ಸಮುಚಿತವಾಗಿ ಅನ್ವಯಿಸುತ್ತದೆ. ಜಗತ್ತಿನ ಎಲ್ಲ ದಾರ್ಶನಿಕರು, ಮಹಾತ್ಮರು ತಮ್ಮ ಉಪದೇಶದಲ್ಲಿ ನೈತಿಕತೆಗೆ ಒತ್ತುಕೊಡುತ್ತಾರೆ. "ದಯವಿಲ್ಲದ ಧರ್ಮ ಅದೇವುದಯ್ಯಾ, ದಯವೇ ಬೇಕು ಸಕಲಪ್ರಾಣಿಗಳೆಲ್ಲರಲ್ಲಿ" ಎನ್ನುವುದೇ

ಶರಣ ಧರ್ಮಕ್ಕೆ ಪ್ರಧಾನವಾಗಿರುವಂಥದ್ದು. ಧರ್ಮ ಸಾಧನೆಗೆ ಮಾತ್ರವಲ್ಲ, ಆಧ್ಯಾತ್ಮ ಸಿದ್ಧಿಗೂ ಅದೇ ಬುನಾದಿ ಹಾಗೂ ಪ್ರೇರಕ ಶಕ್ತಿಯಾಗಿರುತ್ತದೆ.

ಶರಣರು ಕಾಯಕದ ಮೂಲಕ ಅರಿಷಡ್ವರ್ಗಗಳನ್ನು ಗೆಲ್ಲಲು, ಏಕಾಗ್ರತೆಯನ್ನು ಸಾಧಿಸಲು, ಲಿಂಗಾಂಗ ಸಾಮರಸ್ಯವನ್ನು ಪಡೆಯಲು ಸಾಧ್ಯವಾಗುವಂಥ ಮಾರ್ಗವನ್ನು ಕಂಡುಕೊಂಡರು. ಯಾವ ಉದ್ಯೋಗವನ್ನೆ ಮಾಡುತ್ತಿರಲಿ, ಭಕ್ತಿ ಜ್ಞಾನಗಳು ಕ್ರಿಯೆಯಾಗಿ ಪರಿವರ್ತನೆ ಹೊಂದಲು ಧರ್ಮ ಸಾಧನೆ ಮಾತ್ರವಲ್ಲ, ಆಧ್ಯಾತ್ಮ ಸಿದ್ಧಿಗೂ ಅದೇ ಬುನಾದಿ ಹಾಗೂ ಪ್ರೇರಕ ಶಕ್ತಿಯಿಂದ ಬುದ್ಧಿ ಹೃದಯಗಳು ಒಂದಾಗುತ್ತವೆ. ವಿಶ್ವಶಕ್ತಿಯೇ ಮಾನವನ ಕರಣೇಂದ್ರೀಯಗಳ ಮೂಲಕ ಸೃಜನಕಾರ್ಯಕ್ಕೆ ತೊಡಗುತ್ತದೆ. ಅಂದರೆ ಲಿಂಗಶಕ್ತಿಯೇ ಅಂಗದ ಮೂಲಕ ಹೊರಹೊಮ್ಮುತ್ತದೆ. ಅಂಗಜ್ಞಾನ ಸಂಪೂರ್ಣವಾಗಿ ಮರೆತು ಹೋಗುತ್ತದೆ. ವ್ಯಷ್ಟಿ ಸಮಷ್ಟಿಯಲ್ಲಿ ಲೀನವಾಗುತ್ತದೆ. ಬಸವಾದಿ ಶರಣರು ವಿವಿಧ ಕಾಯಕದಲ್ಲಿ ತೊಡಗಿಸಿಕೊಂಡು ಬಂದ ಅನುಭವದಿಂದ ರಚಿಸಿರುವ ಅವರ ವಚನವಾಣಿಗಳಲ್ಲಿ ಎತ್ತಿತೋರುತ್ತದೆ.

ಕಾಯಕದಲ್ಲಿ ಮೇಲು-ಕೀಳುಗಳಿಲ್ಲ ಎಂಬುದು ಮುಖ್ಯವಾಗಿ ಗಮನಿಸಬೇಕಾದ ಅಂಶವಾಗಿದೆ. ಕಾಯಕದಲ್ಲಿ ತಾರತಮ್ಯ ಎಣಿಸಿದರೆ ಮಾತ್ರ ಮುಟ್ಟು ಚಿಟ್ಟು ಎನ್ನುವುದು ತಟ್ಟುತ್ತದೆ. ಲೋಕದ ಪ್ರತಿಯೊಂದು ವಸ್ತುವೂ ಪ್ರೋಟಾನ್, ನ್ಯೂಟ್ರಾನ್ ಮತ್ತು ಎಲೆಕ್ಟ್ರಾನ್‌ಗಳಿಂದ ರೂಪಗೊಳ್ಳುತ್ತವೆಂಬುದಕ್ಕೆ ವಿಜ್ಞಾನವೇ ಸಾಕ್ಷಿ ನುಡಿಯುತ್ತದೆ. ಅಣು ಪರಮಾಣುಗಳ ಪ್ರಮಾಣ ರಚನೆಗಳಿಗನುಗುಣವಾಗಿ ವಸ್ತುಗಳಲ್ಲಿ ಭೇದ ಪ್ರಭೇದಗಳುಂಟಾಗುತ್ತವೆ. ಗೊಬ್ಬರದ ಮತೊಂದು ರೂಪವೇ ಹೂವು; ಕೊನೆಗೆ ಹೂವೇ ಗೊಬ್ಬರವಾಗುತ್ತದೆ. ಅಂತೆಯೇ ವಸ್ತು ಸಹವಾಸವುಳ್ಳ ಯಾವ ಉದ್ಯೋಗವೂ ಕೀಳಾಗಲಾರದು ಅಥವಾ ಮೇಲಾಗಲಾರದೆಂಬುದು ಬಸವಣ್ಣನವರ ವಚನದಲ್ಲಿ ಕಾಣಬಹುದು.

> "ದೇವಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು
> ಬೆಸಗೊಂಡರೆ, ನಿಮ್ಮಾಣೆ !

ನಿಮ್ಮ ಪುರಾತನರಾಣೆ ! ತಲೆದಂಡ ! ತಲೆದಂಡ!!
ಕೂಡಲಸಂಗಮದೇವಾ, ಭಕ್ತರ ಕುಲವನರಸಿದಡೆ,
ನಿಮ್ಮ ರಾಣಿವಾಸದಾಣೆ!"

–ಬಸವಣ್ಣನವರು

ಸಮಾಜದಲ್ಲಿ ಕಾಯಕಕ್ಕೆ ಮಹತ್ವವನ್ನು ನೀಡಿದ್ದಾದರೆ ಸಂಕುಚಿತ ಮನೋಭಾವನೆಗಳಿಗೂ, ಅಲ್ಪತನಕ್ಕೂ, ಅನೀತಿಗೂ ಅವಕಾಶ ಇರಲಾರದೆಂದು ಬಸವಣ್ಣನವರು ನುಡಿದಿದ್ದಾರೆ. ಈ ಭರತ ಖಂಡದ ಅವನತಿಗೆ ವೃತ್ತಿ ತಾರತಮ್ಯ ಭಾವನೆಯೇ ಕಾರಣವೆಂಬುದನ್ನೂ, ಅದೇ ಜಾತಿಗಳ ಉಗಮ ಕಲಹಗಳಿಗೂ ನಿಮಿತ್ತವಾಯಿತೆಂಬುದನ್ನೂ ಮರೆಯುವಂತಿಲ್ಲ. ಆದರೆ ಬಸವಣ್ಣನವರು ಸೃಷ್ಟಿಸಿದ ಲಿಂಗಾಯತ ಧರ್ಮ ಬರೀ ಜಾತಿ–ಮತವಲ್ಲ, ಅದೊಂದು ಚಳವಳಿ ಎಂದು ಗ್ರಹಿಸಬಹುದಾಗಿದೆ. ಅಷ್ಟಾವರಣಗಳಿಗಿಂತ ಮಿಗಿಲಾಗಿ ಕಾಯಕಯೋಗ ಜಾತಿ ವರ್ಗ ನಿರ್ಮೂಲನಕ್ಕೆ ಸಮರ್ಥ ಸಾಧನವಾಗುತ್ತದೆಂಬುದನ್ನು ಬಸವಾದಿ ಶರಣರು ಅನುಷ್ಠಾನದ ಮೂಲಕ ಲೋಕದ ಗಮನಕ್ಕೆ ತರುತ್ತಾರೆ.

ಕುಲವೊಂದೆ ಶಿವಕುಲ, ಜಾತಿಯೊಂದೆ ಶಿವಜಾತಿ, ಶಿವಭಕ್ತನೆ ಕುಲಜ ಎಂದು ಮಾನವಕುಲ ಮಾನವಜಾತಿಯಲ್ಲಿ ಮಾನವೀಯತೆಯ ಶಿವಬೀಜವನ್ನು ಬಿತ್ತಿ, ಭಕ್ತಿಯಲ್ಲಿ ಕುಲ, ಜಾತಿ, ವರ್ಣ, ವರ್ಗವನ್ನು ಎಣಿಸಬಾರದೆಂದು ಉದಯಿಸಿದ ಬಸವಾದಿ ವಚನಕಾರರು ಇಡೀ ಮಹಿಳಾ ವರ್ಗಕ್ಕೆನೇ ಹೊಸ ಆಯಾಮವು ತಂದು ಕೊಟ್ಟರು. ಬಸವಣ್ಣನವರ ಸಾಮಾಜಿಕ–ಧಾರ್ಮಿಕ ಕ್ರಾಂತಿಯಿಂದ ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲೂ ಸಮಾನ ಅವಕಾಶ ದೊರೆಯತೊಡಗಿತು. ಹೆಣ್ಣನ್ನು ಅತ್ಯಂತ ಕೀಳು ದೃಷ್ಟಿಯಿಂದ ಕಾಣುತ್ತಿದ್ದ ಆ ಕಾಲದಲ್ಲಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದ್ದ ಮಹಿಳೆಯು ಈ ಧಾರ್ಮಿಕ ಕ್ರಾಂತಿಯಲ್ಲಿ ಸುಮಾರು ಮೂರುನೂರಕ್ಕೂ ಹೆಚ್ಚು ಮಹಿಳೆಯರು ಶರಣ ಸಮೂಹದಲ್ಲಿ ಭಾಗವಹಿಸಿದ್ದರೆಂದು ಕಂಡುಬರುತ್ತದೆ. ಜಗತ್ತಿನ ಯಾವ ಇತಿಹಾಸದಲ್ಲೂ ಇಷ್ಟು ಸಂಖ್ಯೆಯಲ್ಲಿ ಸ್ತ್ರೀಯರು

ಚಳವಳಿಯಲ್ಲಿ ಏಕಕಾಲಕ್ಕೆ ಭಾಗವಹಿಸಿದ್ದು ಗಣನೀಯವಾಗಿ ಸಾಹಿತ್ಯ ರಚನೆ ಮಾಡಿದ್ದು ಕಾಣಿಸದು. ಇವರಲ್ಲಿ ೩೩-೩೫ ಜನ ವಚನಕಾರ್ತಿಯರು ರಚಿಸಿದ ವಚನಗಳು ಮಾತ್ರ ನಮಗೆ ಲಭ್ಯವಾಗಿರುವವು. ಇವರ ಸಾಲಿನಲ್ಲಿ ಬರುವ ವಚನಕಾರ್ತಿಯು ಆದ ಗೊಗ್ಗವ್ವೆಯು ಕೂಡ ವಿಶ್ವಮಾನವ ಧರ್ಮವನ್ನು ಪ್ರತಿಷ್ಠಾಪಿಸಿದ ಮಹಾಮಾನವತಾವಾದಿ ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿ ಬರುವವರ ಸಾಲು-ಸಾಲಿನ ಶರಣರಲ್ಲಿ ಒಬ್ಬರಾದ ಧೂಪದ ಗೊಗ್ಗವ್ವೆ ಕೇರಳದಿಂದ ಕಲ್ಯಾಣಕ್ಕೆ ಬಂದು ಶಿವಭಕ್ತರಿಗೆ ಧೂಪವನ್ನು ಅರ್ಪಿಸುವ ಕಾಯಕವನ್ನು ನಿರ್ವಹಿಸುತ್ತಲೆ ಪ್ರಸಿದ್ಧರಾದವರು.

ಜನನ ಮತ್ತು ಬಾಲ್ಯ

ಭಾರತದ ಕೇರಳ ರಾಜ್ಯದಲ್ಲಿ ಬರುವ ಅವಲೂರು ಗ್ರಾಮದ ಶಿವಭಕ್ತಿಯುತರಾದ ದಂಪತಿಗಳಿದ್ದು ಅವರ ಉದರದಲ್ಲಿ ಗೊಗ್ಗವ್ವೆಯು ಜನಿಸಿದಳು. ತಂದೆ ತಾಯಿಯರ ಕೈಹಿಡಿದು ಗೊಗ್ಗವ್ವೆಯೂ ಅವರಂತೆ ಶಿವಭಕ್ತಿಯುತಳಾಗಿ ಬೆಳೆಯತೊಡಗಿದಳು. ಬಾಲ್ಯದಿಂದಲೇ ಶಿವಭಕ್ತಿಯನ್ನು ಮೈಗೂಡಿಸಿಕೊಂಡು ವೈರಾಗ್ಯ ತಾಳಿದಳು. ಆ ಊರಿನ ದೇವರಾದ ಗೊಗ್ಗೇಶ್ವರರ ಕರುಣೆಯಿಂದ ಜನಿಸಿದ ಮಗಳು ಭಕ್ತಿಸಂಪನ್ನೆಯಾದ ಗೊಗ್ಗವ್ವೆ ಬೆಳೆದಂತೆ ಹೆತ್ತವರು ಮದುವೆ ಮಾಡಬೇಕೆಂದು ಬಯಸಿ ಯೊಗ್ಯ ವರನ ವಿಚಾರಣೆ ನಡೆಸುತ್ತಾರೆ. ತಂದೆ ತಾಯಿಯರು ಮದುವೆ ವಿಚಾರ ಪ್ರಸ್ತಾಪಿಸುತ್ತಿದ್ದಂತೆ ಗೊಗ್ಗವ್ವೆ ನನಗೆ ಮದುವೆ ಬೇಡ ಶಿವನ ಸೇವೆಯಲ್ಲಿಯೇ ಇರುವೆನೆಂದು ಹೇಳಿದಳು. ಆದರೆ ಹೆತ್ತವರು ಮಗಳಿಗೆ ಮದುವೆಯಾಗದೆ ಇರುವುದು ಸಮಾಜದಲ್ಲಿ ಸರಿಯಾದುದಲ್ಲ ಎಂದು ತಿಳಿಸುತ್ತಾ, ವರನ ಶೋಧನೆ ಮುಂದುವರೆಸುತ್ತಾರೆ. ಆಗ ಗೊಗ್ಗವ್ವೆ ಇಲ್ಲಿಯೇ ಇದ್ದರೆ ತನ್ನ ಇಚ್ಛೆ ನೆರವೇರದೆಂದು ಭಾವಿಸಿ ಯಾರಿಗೂ ತಿಳಿಯದಂತೆ ಮನೆಯನ್ನು ಬಿಟ್ಟು, ಹೋಗಿ ಗೊಗ್ಗೇಶ್ವರನ ದೇವಾಲಯದಲ್ಲಿ ಅವಿತುಕೊಂಡು ಕುಳಿತುಕೊಳ್ಳುತ್ತಾಳೆ.

ಹೆತ್ತವರ ಹುಡುಕಾಟ

ಮನೆಯಲ್ಲಿ ಮಗಳಾದ ಗೊಗ್ಗವ್ವೆ ಕಾಣದಿರುವುದನ್ನು ಗಮನಿಸಿದ ತಂದೆ-ತಾಯಿಯರು ಗಾಬರಿಯಾಗುತ್ತಾರೆ. ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಮೂರು ದಿವಸಗಳ ಕಾಲ ಹುಡುಕಾಡಿದರೂ ಮಗಳು ಸಿಗುವುದಿಲ್ಲ. ದಿಕ್ಕೆ ತೊಚದೇ ಇರುವಾಗ ದೇವರೆ ಗತಿ ಎಂದುಕೊಂಡು, ಹುಡುಕುತ್ತಾ, ಹುಡುಕುತ್ತಾ ಗೊಗ್ಗೇಶ್ವರ ದೇವಾಲಯಕ್ಕೆ ಬಂದು ಅತ್ಯಂತ ಮನ ಮರುಗಿ ಅವರಿಬ್ಬರೂ ಗೊಗ್ಗೇಶ್ವರ ಸ್ಥಾವರಲಿಂಗದ ಮುಂದೆ ಕುಳಿತು, 'ಹೇ ದೇವಾ' ಗೊಗ್ಗೇಶ್ವರ ದೇವನೆ, ನಿನ್ನ ಕರುಣೆಯಿಂದಲೆ ಜನಿಸಿದ ಮಗು ನಿನ್ನ ಹೆಸರಿಂದಲೆ ಕರೆಯಿಸಿಕೊಳ್ಳುವ ಮಗಳು ಗೊಗ್ಗವ್ವೆ ಕಾಣೆಯಾಗಿದ್ದಾಳೆ. ಇನ್ನೂ ಮೇಲೆ ನೀನೇ ಆಕೆಯನ್ನು ರಕ್ಷಿಸು. ಆಕೆಯ ಮನಸ್ಸನ್ನು ಅರಿಯುವ ಸಾಮರ್ಥ್ಯ ನಮಗಿಲ್ಲ. ಅವಳ ಕೈಹಿಡಿದು ಮುನ್ನಡೆಸು ತಂದೆ ಎಂದು ಭಕ್ತಿಭಾವದಿಂದ ಗೊಗ್ಗೇಶ್ವರನಿಗೆ ಬೇಡಿಕೊಂಡು ಮನೆಗೆ ಹೋಗುತ್ತಾರೆ.

ಗೊಗ್ಗವ್ವೆಯು ಅದೇ ದೇವಾಲಯದಲ್ಲಿ ಒಂದಕಡೆ ಮರೆಯಲ್ಲಿ ನಿಂತುಕೊಂಡು ತಂದೆ ತಾಯಿಯರು ದೇವರಿಗೆ ಬೇಡಿಕೊಳ್ಳುವುದನ್ನು ಕೇಳಿಸಿಕೊಳ್ಳುತ್ತಾಳೆ. ಅವರಿಗೆ ಇನ್ನೂ ಹೆಚ್ಚು ಆತಂಕ ಪಡಿಸುವುದು ಸರಿಯಲ್ಲ ಎಂದುಕೊಂಡು, ಮನೆಗೆ ಹಿಂದಿರುಗಿ ಹೋಗುತ್ತಾಳೆ. ಮಗಳು ಮನೆಗೆ ಬಂದಿರುವುದು ಹೆತ್ತವರಿಗೆ ಹರುಷವುಂಟು ಮಾಡಿತು. ಆನಂದ ಭಾಷ್ಪಸುರಿಸುತ್ತಾ, ಮಗಳೆ ನೀನು ಮದುವೆ ಬೇಡ ಎಂದರೆ ಬಿಟ್ಟುಬಿಡು. ನಿನ್ನ ಮನಸ್ಸಿಗೆ ಬಂದಂತೆ ಪೂಜೆ ಮಾಡಿಕೊಂಡು ಸಂತೊಷದಿಂದರು ಎಂದು ಹೇಳಿದರು. ಭಕ್ತಿ ಪರಿಸರದಲ್ಲಿ ಬೆಳೆದ ಗೊಗ್ಗವ್ವೆಗೆ ಲೌಕಿಕ ಜೀವನಕ್ಕಿಂತ ವೈರಾಗ್ಯ ಜೀವನವೆ ಹೆಚ್ಚು ಪ್ರಿಯವಾಗಿದೆಯೆಂಬ ಅವಳ ಮನದಿಚ್ಛೆಯನ್ನು ಅರಿತ ಹೆತ್ತವರು ಮಗಳ ಮನಸ್ಸಿನಂತೆ ಬದುಕಲು ಅವಕಾಶ ಮಾಡಿಕೊಡುತ್ತಾರೆ.

ಶಿವನ ಪರೀಕ್ಷೆ

ಗೊಗ್ಗವ್ವೆಯು ಕಲ್ಯಾಣದಿಂದ ಬರುವ ಚರಜಂಗಮರಿಂದ ಅಲ್ಪಸ್ವಲ್ಪ ಇಷ್ಟಲಿಂಗ ಪೂಜೆಯ ಬಗ್ಗೆ ಬಲ್ಲವಳಾಗಿದ್ದಳು. ಆದರೆ ಇಷ್ಟಲಿಂಗ ಪೂಜೆಯು

ಮಾಡಿಕೊಳ್ಳುವ ವಿಧಾನ ಸರಿಯಾಗಿ ಗೊತ್ತಿರಲಿಲ್ಲ. ಆದ್ದರಿಂದ ದಿನಾಲು ಶಿವಾಲಯಕ್ಕೆ ಹೋಗಿ ದೀಪವನ್ನು ಹತ್ತಿಸಿ, ದೇವರಿಗೆಂದು ಧೂಪ ಅರ್ಪಿಸುವ ಕಾಯಕ ಕೈಕೊಂಡು ಶಿವಪೂಜೆಯಲ್ಲಿ ಧೂಪವನಿಕ್ಕಿ ಬರುತ್ತಿದ್ದಳು. ಹೀಗಿರುವಲ್ಲಿ ಒಂದು ದಿನ ಪರಶಿವನು ಗೊಗ್ಗವ್ವೆಯ ಭಕ್ತಿಯನ್ನು ಪರೀಕ್ಷಿಸಬೇಕೆಂದು ಬಯಸಿ ಸ್ಪುರದ್ರೂಪಿ ಯುವಕನ ವೇಷಧರಿಸಿ ಗೊಗ್ಗವ್ವೆಯ ಎದುರಿಗೆ ಬಂದು ತನ್ನನ್ನು ವರಿಸಿ ಮದುವೆಯಾಗಬೇಕೆಂದು ಒತ್ತಾಯಿಸುತ್ತಾನೆ. ನೀನು ನನ್ನ ಸತಿಯಾಗಬೇಕೆಂದು ಕಠೋರವಾಗಿ ನುಡಿಯುತ್ತಾ ಅವಳನ್ನು ಭೀತಿಗೊಳಿಸಿದನು. ಆದರೆ ಗೊಗ್ಗವ್ವೆಯು ಅಂಜುವುದಿಲ್ಲ. ಧೈರ್ಯದಿಂದ ನೀನು ಏನೇ ಹೇಳಿದರೂ ನಾನು ನಿನ್ನನ್ನು ವರಿಸುವುದಿಲ್ಲ ಎಂದು ಮದುವೆಯಾಗಲು ಒಪ್ಪದೆ ನಿರಾಕರಿಸುತ್ತಾಳೆ. ಶಿವನಲ್ಲಿ ನಿಷ್ಠೆಯಿಟ್ಟು ಭಕ್ತಿಯಿಂದ ಕಣ್ಣುಮುಚ್ಚಿ 'ಶಿವ, ಶಿವಾ' ಎಂಬ ನಾಮಸ್ಮರಣೆಯಿಂದ ಸ್ತುತಿಸುತ್ತಾ ನಿಂತಾಗ, ಶಿವನು ಅವಳ ಶಿವಭಕ್ತಿ ನಿಷ್ಠೆಗೆ ಮೆಚ್ಚಿ ಪ್ರತ್ಯಕ್ಷನಾಗಿ– ನಾನು ನಿನ್ನ ಭಕ್ತಿಗೆ ಮೆಚ್ಚಿದೆನು. ನಿನಗೆ ಬೇಕಾದ್ದನ್ನು ಬೇಡು ಕೊಡುವೆನು ಎಂದು ಬಯಸಿದ್ದನ್ನು ಕೊಡಲು ಮುಂದಾಗುತ್ತಾನೆ. ಆಗ ಗೊಗ್ಗವ್ವೆ ನನಗೇನು ಬೇಡ, ನಾನು ಶಿವಭಕ್ತರ ಬಳಿಯಲ್ಲಿದ್ದುಕೊಂಡು ಅವರಿಗೆ ನನ್ನ ಭಕ್ತಿಯ ಸೇವೆ ಸಲ್ಲುವಂತೆ ಮಾಡು ಎಂದು ಕೇಳಿಕೊಳ್ಳುತ್ತಾಳೆ. ಶಿವನು ಗೊಗ್ಗವ್ವೆಗೆ ತಾನೇ ಗುರುವಾಗಿ ಮಾರ್ಗದರ್ಶನ ಮಾಡಿಸುವಂತೆ, ನೀನು ಶಿವಶರಣರಲ್ಲಿಗೆ ಹೋಗಿ ಅವರ ಲಿಂಗ ಪೂಜೆಗೊಸ್ಕರ ಧೂಪವನ್ನರ್ಪಿಸುವ ಕಾಯಕವನ್ನು ತಪ್ಪದೆ ಅನುಸರಿಸು ಎಂದು ನುಡಿದು ಅಂತರ್ಧಾನನಾದನು. ಅಂದಿನಿಂದ ಗೊಗ್ಗವ್ವೆ ತನ್ನ ಧೂಪದ ಕಾಯಕವನ್ನು ನಡೆಸುತ್ತಾ ಶಿವಾನುಭದಲ್ಲಿ ಇರುತ್ತಿದ್ದಳು. ಈ ದಂತಕಥೆ ಗೊಗ್ಗವ್ವೆಯ ಶಿವನಿಷ್ಠೆಯ ಸಂಕೇತವಾಗಿದೆ.

ಇನ್ನೂ ಕೇರಳದ ಕುಡುಗಲೂರ ರಾಜನಾದ ಚೇರಮರಾಯನಿಗೆ ಪರಮಾತ್ಮನು ನಂಬೆಯಣ್ಣನೆಂಬ ಶಿವಭಕ್ತನನ್ನು ಕೈಲಾಸಕ್ಕೆ ಕರೆದೊಯ್ದನೆಂಬ ಕಾರಣಕ್ಕೆ ತಾನು ಕೈಲಾಸ ನೋಡಬೆಂಕೆಂಬ ಹಂಬಲದಿಂದ ಹುಡುಕಾಡುತ್ತಿರುವಾಗ, ಗೊಗ್ಗವ್ವೆಯು ಎದುರಾಗಿ ಧೂಪದ ಹೊಗೆಯ ಮೂಲಕ ಕೈಲಾಸದ ದಾರಿಯನ್ನು ತೋರಿಸಿದಳು ಎಂದೆಲ್ಲಾ ಪೌರಾಣಿಕವಾಗಿ

ಬಿಂಬಿಸುತ್ತಾರೆ. ಚೇರಮರಾಯನ ಕಾಲ ಕ್ರಿಶ. ೭ನೆಯ ಶತಮಾನವೆಂದು, ವಚನಕಾರ್ತಿಯಾದ ಧೂಪದ ಗೊಗ್ಗವ್ವೆಯ ಕಾಲ ೧೨ನೆಯ ಶತಮಾನ, ಆದ್ದರಿಂದ ಆ ಕಾಲದ ಗೊಗ್ಗವ್ವೆಯು ಬೇರೆ ಇರಬಹುದು ಎನ್ನಲಾಗುತ್ತದೆ.

ಕಲ್ಯಾಣದಲ್ಲಿ ನಿಜದಿರವ ತೋರುವ ದೀವಿಗೆ

ಬಸವಾದಿ ಶರಣರ ಇಷ್ಟಲಿಂಗಕ್ಕೆ ಧೂಪವನರ್ಪಿಸುವ ಮಹದಾಸೆಯನ್ನು ಮನದಲ್ಲಿ ಹೊತ್ತುಕೊಂಡು ಗೊಗ್ಗವ್ವೆ ದಿನ ಕಳೆಯುತ್ತಿದ್ದಳು. ಉದಯಮಾನ, ಅಸ್ತಮಾನ ! ಮೂಡುವುದು ಮುಳುಗುವುದು; ಮತ್ತೆ ಮೂಡುವುದು ಮತ್ತೆ ಮುಳುಗಿವುದು! ಆಯಿತ್ತು, ಹೋಯಿತ್ತು ! ಹೇಗೋ ಬಂತು : ಹೇಗೋ ಹೋತು! ಏಕೆ ಬಂದಿತ್ತು, ಏಕೆ ಹೋಯ್ತು? ಯಾರಿಗೆ ಗೊತ್ತು? ಕರೆಯದೆ ಬಂದುದ, ಹೇಳದೆ ಹೋದುದನಾರು ಅರಿಯರಲ್ಲಾ! ಅತಿಸೂಕ್ಷ್ಮವಾದ ಜೀವಾಣುವೊಂದು ನನ್ನಾತ್ಮದಲ್ಲಿ ಹರಿದಾಡುತ್ತಾ ಕೈಬೀಸಿ ಕರೆಯುತ್ತಿದ್ದಂತೆ ಭಾಸವಾಗುತ್ತಿದೆಯಲ್ಲಾ! ಎಂದು ವಿಚಾಧಾರೆಯಲ್ಲಿ ಮುಳುಗಿದ್ದ ಗೊಗ್ಗವ್ವೆ ಕಲ್ಯಾಣದತ್ತ ಹೆಜ್ಜೆ ಹಾಕುತ್ತಾಳೆ.

ಚರಜಂಗಮರು ಎಲ್ಲಾ ಕಡೆಗಳಲ್ಲೂ ಚಲಿಸುತ್ತಿದ್ದು, ಅನೇಕ ಶರಣರ ವಚನಗಳಲ್ಲಿ ಕಲ್ಯಾಣದಲ್ಲಿ ನಿಜದಿರವ ತೋರುವ ದೀವಿಗೆಯ ಬೆಳಕನ್ನು ಮೂಡಿಸುವ ವಚನಗಳನ್ನು ಬಿತ್ತರಿಸುತ್ತಾ ಸಾಗುತ್ತಿದ್ದರು.

"ಅಯ್ಯಾ, ನಾನು ಹುಟ್ಟಿದಂದಿಂದ ಲಿಂಗವನಲ್ಲದೆ ಆರಾಧಿಸೆ.
ಜಂಗಮಕ್ಕಲ್ಲದೆ ನೀಡೆ, ಶರಣಸಂಗವಲ್ಲದೆ ಮಾಡೆ.
ಕಲ್ಯಾಣದ ಮಹಾಗಣಂಗಳೊಂದು ಹೊಳೆಯ ಮಾಡಿಕೊಟ್ಟರು.
ಆ ಹೊಳೆಯಲ್ಲಿ ಹೆಣ್ಣು ಗಂಡು ಸುಳಿಯಲೀಯೆನು.
ಚಿಕ್ಕವರು ಹಿರಿಯರ ಸುಳಿಯಲೀಯೆನು.
ಎಲ್ಲಾ ಮಹಾಗಂಣಗಳು ಎನ್ನ ಹೊಳೆಯಲೆ ಹಾಯುವರು.
ಲಿಂಗದ ವಸ್ತ್ರವನೊಗೆದು ಕಾಯಕದಲ್ಲಿ ಶುದ್ಧನಾದೆನು.
ಎನ್ನ ಕಾಯಕವನವಧರಿಸು ಕಲಿದೇವಯ್ಯಾ"

–ಮಡಿವಾಳಮಾಚಿದೇವರು

ಮಡಿವಾಳ ಮಾಚಿದೇವರು ಕಲ್ಯಾಣದಲ್ಲಿನ ಶರಣರ ಸಂಗದಲ್ಲಿನ ಆನಂದ, ಕಲ್ಯಾಣದಲ್ಲಿನ ಭಕ್ತಿಯ ಹೊಳೆಯಲ್ಲಿ ಕಾಯಕದ ಮಹತ್ವ ಮತ್ತು ಹೆಣ್ಣು ಗಂಡಿನ ಭೇದ ಭಾವವಿಲ್ಲದೆ ಸಮಾನತೆಯನ್ನು ಸಾರುವ ವಾತಾವರಣ ಶರಣ ಸಂಕುಲದಲ್ಲಿನ ಪರಮಸುಖದ ಸನ್ನಿಧಿಯನ್ನು ಸಾರುವಂಥ ವಚನಗಳು ಆಲಿಸುತ್ತಿದ್ದಂತೆ, ತಾನು ಯಾವಾಗ ಕಲ್ಯಾಣ ಸೇರುವೆನೊ ಎನ್ನುವ ಹಂಬಲದಲ್ಲಿ ಧೂಪದ ಕಾಯಕ ಮಾಡುತ್ತಾ, ಕಲ್ಯಾಣದ ಕಡೆಗೆ ಪಯಣ ಸಾಗಿಸಿದಳು. ಕಲ್ಯಾಣದಲ್ಲಿನ ಅನುಭವ ಮಂಟಪದಲ್ಲಿ ನಡೆಯುವ ಚರ್ಚೆಗಳು ಸಾರಲ್ಪಡುತ್ತಿದ್ದವು. ಜನಪದವು ಆಗಲೇ ವೇದಗಳಲ್ಲಿ ಹುರುಳಿಲ್ಲವೆಂದು ಅರಿತು ಅವುಗಳ ಸಂಬಂಧದ ಕಡೆಗೆ ಅನಾದರ ತೋರಿಸಹತ್ತಿತ್ತು. ವೇದಗಳ ಬದಲಾಗಿ ಶಿವಶರಣರ ವಚನಗಳು ಮನೆ ಮನೆ ಮಾತಾಗಿ ಜನಪದವು ಅವಗಳನ್ನು ಬಲು ಆದರದಿಂದ ಬರಮಾಡಿಕೊಂಡಿತಲ್ಲದೆ, ಜನರು ಅವುಗಳ ಅರ್ಥವನ್ನು ಅರಿತು ಜೀವನದಲ್ಲಿ ಅದರಂತೆ ವರ್ತಿಸುತ್ತಿದ್ದರು.

> "ಕಾಡಿನೊಳಗಿರು ಹಾದಿ ಮೂಡಿ ವೇದಗಳಾಗಿ
> ನಾಡೆನ್ನ ನುಂಗಿ ನಗುತಿರಲು । ಶಿವಮತವು
> ನಾಡ ಮೇಲಿರುವ ಶಿವಲೋಕ"

ಜನಪದವು ಜನತೆಯನ್ನು ಉದ್ಧಾರಮಾಡುವ ಧರ್ಮದ ಹಾದಿಯನ್ನು ಕಾಯುತ್ತಿತ್ತು. ಅನೇಕ ಧರ್ಮಗಳ ನೈತಿಕ ಮಾರ್ಗವು ಹದಗೆಟ್ಟಿತ್ತು. ಅವುಗಳ ಪ್ರಚಾರವೇ ಬೇರೆ, ಆಚಾರವೇ ಬೇರೆ ಇರುವುದನ್ನುತಿಳಿಸುವುದರ ಮೂಲಕ ಜನಪದರು ಜನತೆಯಲ್ಲಿ ಧರ್ಮದ ವಿಷಯವಾಗಿ ಜಾಗ್ರತೆಯನ್ನುಮೂಡಿಸಿ, 'ನುಡಿದಂತೆ ನಡೆದರೆ ಅದೇ ಕೈಲಾಸ' ಎಂಬ ಶಿವಶರಣರ ತತ್ತ್ವಗಳು ಜನತೆಯಲ್ಲಿ ಪ್ರಚಾರ ಮಾಡುತ್ತಿದ್ದರು.

> "ತುಂಬಿ ತುಳಕಿತು ಬೆಳಕು ಇಂಬ ನೀಯಿತು ಜಗಕೆ
> ಕಂಬ ಬಸವೆಂದು ಹೊಸಮತಕೆ । ಕಲ್ಯಾಣ
> ಮುಂಬದಿಯ ಬೇರೆ ಮೊಳಗಿದವು."

ಕಲ್ಯಾಣದಲ್ಲಿನ ಬಸವಾದಿ ಶರಣರ ಸನ್ನಿಧಿಯಲ್ಲಿ ವಿಚಾರ ವಿನಿಮಯಗಳು ನಡೆದು, ಶಿವಾನುಭವ ಮಂಟಪವು ಅಸ್ತಿತ್ವದಲ್ಲಿ ಬಂತು. ಅದರ ಬೆಳಕು, ಜ್ಞಾನದೀವಿಟಿಗೆಯಾಗಿ ಜನತೆಗೆ ಮೋಕ್ಷಮಾರ್ಗವನ್ನು ತೋರಿಸಹತ್ತಿತ್ತು. ಅದರ ಪರಿಣಾಮವಾಗಿ ಶರಣರು ವಚನರಾಶಿಗಳನ್ನು ಪಸರಿಸುತ್ತಾ ಎಲ್ಲೆಡೆಗೆ ಚರಜಂಗಮರು ಓಡಾಡುತ್ತಿದ್ದರು.

"ಸೋಸಿ ವಚನದ ತಿರುಳ । ಬೀಸಿದವು ಶಿವಗಾಳಿ
ಮೂಸಿ ಬಂದಂತೆ ಗುಂಗಿಗಳು । ಹೂಗಳಿಗೆ
ರಾಶಿ ಜನ ಬಂತು ಮಂಟಪಕೆ."

ಬಸವಣ್ಣನವರು ಹೊಸಮತದಲ್ಲಿ ಎಲ್ಲರನ್ನೂ ಬರಮಾಡಿಕೊಂಡರು. ಅವರಿಗೆ ಶಿವಾನುಭವವನ್ನು ಅರುಹಿದರು. ಹೊಲೆಯ ಕುಲಜರೆಂಬ ಮಾತುಗಳು ಮಾನವನ ನೀತಿರೀತಿಗಳೆಂಬ ಶರಣರ ನಿಜದೀರಿವಿನ ನಿಲವಿನ ವಿಶಾಲ ಕಲ್ಪನೆಯನ್ನು ಜನತೆಗೆ ತೋರಿಸಿಕೊಟ್ಟರು.

ಕಲ್ಯಾಣದ ಪ್ರಣತೆಯಲ್ಲಿ ಗೊಗ್ಗವ್ವೆ

ಕರ್ನಾಟಕದ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನವೆಂದರೆ ಬಸವಾದಿ ಶರಣರಿಂದಾಗಿ ಕಂಗೊಳಿಸುತ್ತಿದ್ದ ಕಲ್ಯಾಣದ ಕೇಂದ್ರ ಬಿಂದು ಅನುಭವ ಮಂಟಪವಾಗಿತ್ತು. ಅಲ್ಲಿ ಮುಕ್ತ ಹಾಗೂ ಸಮಾನತೆಯ ವೇದಿಕೆಯ ಮುಖಾಂತರ ವಚನಕಾರರು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದರು. ತಮ್ಮ ವ್ಯಕ್ತಿತ್ವ ವಿಕಸನದ ಜತೆಗೆ, ಅನೇಕ ಹೊಸ ಮೌಲ್ಯಗಳನ್ನು ಆ ವೇದಿಕೆಯಲ್ಲಿ ಹುಟ್ಟು ಹಾಕುವುದರ ಮೂಲಕ ಸಮಾಜದ ಸಹಸ್ರಾರು ಸಾಮಾನ್ಯ ಜನತೆಯ ವ್ಯಕ್ತಿತ್ವದ ಬೆಳವಣಿಗೆಗೆ ಕಾರಣವಾದರು. ಇವತ್ತಿನ ಬದುಕಿಗೂ ಇಂತಹ ಅನುಭವ ಮಂಟಪದ ಬೆಳಕು, ವಚನಕಾರರ ಹೋರಾಟ ಪ್ರಸ್ತುತವಾಗುತ್ತದೆ. ಕನ್ನಡ ನೆಲದಲ್ಲಿ ಜನಸಮುದಾಯಕ್ಕೆ ಮೊದಲಬಾರಿಗೆ ಸಹಜವಾದ ವ್ಯಕ್ತಿತ್ವದ ಪರಿಚಯ ಮಾಡಿಕೊಟ್ಟವರೆಂದರೆ ವಚನಕಾರರು. ರಾಜಸತ್ತೆಯ ಕಪಿಮುಷ್ಠಿಯಲ್ಲಿ ಜನಸಮುದಾಯದ ವ್ಯಕ್ತಿತ್ವವೆಲ್ಲಾ ಕುಸಿದುಹೋಗಿ ರಾಜಮಹಾರಾಜರ ವ್ಯಕ್ತಿತ್ವವೇ ರಾಜ್ಯದ ತುಂಬಾ

ವಿಜೃಂಭಿಸುತ್ತಿರುವಾಗ ವಚನಕಾರರು ಸಾಮಾನ್ಯ ಜನತೆಯಲ್ಲಿ ಅರಿವು ಆಲೋಚನೆಗಳನ್ನು ಹುಟ್ಟುಹಾಕುವುದರ ಮುಖಾಂತರ ಹೊಸ ವ್ಯಕ್ತಿತ್ವವನ್ನು ಕಟ್ಟಿಕೊಟ್ಟರು. ಪ್ರತಿಯೊಬ್ಬ ವಚನಕಾರರು ಒಂದೊಂದು ಬಗೆಯ ವಿಶಿಷ್ಟ ವ್ಯಕ್ತಿತ್ವ ಪಡೆದಿದ್ದಾರೆ.

ಕಲ್ಯಾಣದಲ್ಲಿ ಬೆಳದಿಂಗಳು ಹರವಿದರೆ ತಂಗಾಳಿ ತೀಡಿದರೆ, ಪರಿಮಳ ಸುಳಿದರೆ ಮಧುಮಾಸ ಸಂಚರಿಸಿದರೆ, ಕೋಗಿಲೆ ಕೂಗಿದರೆ ಇಮ್ಮಾವು ಚಿಗುರೊಡೆಯುತ್ತಿರೆ ಕವಿಯ ಹೃದಯ ಹೇಗೆ ಪಾವನವನ್ನು ಪಡೆಯುತ್ತದೆ. ಹಾಗೆಯೇ ಶರಣರು ದಿನನಿತ್ಯದ ಶಿವಾನುಭವದ ಗೋಷ್ಠಿಯ ಪರಮಾನಂದದಲ್ಲಿ ಮುಳುಗುತ್ತಿದ್ದರು. ಇದಕ್ಕೆ ಸಾಕ್ಷಿ ಎಂಬಂತೆ ಅಲ್ಲಮಪ್ರಭುದೇವರ ವಚನದಲ್ಲಿ ವಿಜೃಂಭಿಸುತ್ತಿರುವುದು ಎತ್ತಿಹಿಡಿದಿದೆ.

> **"ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು,**
> **ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು,**
> **ತೊಳಗಿ ಬೆಳಗುತ್ತಿದ್ದಿತ್ತಯ್ಯಾ ಶಿವನ ಪ್ರಕಾಶ !**
> **ಆ ಬೆಳಗಿನೊಳಗೆ ಒಪ್ಪುತ್ತಿದ್ದರಯ್ಯಾ ಅಸಂಖ್ಯಾತ ಭಕ್ತಗಣಂಗಳು.**
> **ಶಿವಭಕ್ತರಿರ್ದ ಕ್ಷೇತ್ರವೆ ಅವಿಮುಕ್ತಕ್ಷೇತ್ರವೆಂಬುದು ಹುಸಿಯೇ ?**
> **ಶಿವಭಕ್ತರಿರ್ದ ದೇಶ ಪಾವನವೆಂಬುದು ಹುಸಿಯೇ ?**
> **ಗುಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನಬಸವಣ್ಣನ ಕಂಡು,**
> **ಬದುಕಿದೆನು ಕಾಣಾ ಸಿದ್ಧರಾಮಯ್ಯಾ."**
>
> **–ಅಲ್ಲಮಪ್ರಭುದೇವರು**

ವ್ಯೋಮಮೂರುತಿ, ಶೂನ್ಯಪೀಠಾಧೀಶ್ವರ ಅಲ್ಲಮಪ್ರಭುಗಳು ಬಸವಣ್ಣನವರು ಕಟ್ಟಿದ ಕಲ್ಯಾಣವನನ್ನು ಕುರಿತುನುಡಿದ ಈ ವಚನವು ಪವಿತ್ರಭಾವದ ರಸಚಿತ್ರ, ಅದು ಇದು ಎನ್ನದೆ ಎಲ್ಲರ ಹೃದಯಕ್ಕೆ ಮಹಾಮಂಗಲದ ಮಳೆಯನ್ನು ಕರೆವಂತಿದೆ. ಪ್ರಭುದೇವರು ಸಿದ್ಧರಾಮಯ್ಯದೇವರಿಗೆ ಬಸವಣ್ಣನವರ ಕಲ್ಯಾಣದ ಮಹಾತ್ಮೆಯನ್ನು ಕಂಡಾಗ ಅವರ ಹೃದಯದಿಂದ ಉಕ್ಕಿ ಬಂದಿರುವ ನುಡಿಗಳು. ಕಲ್ಯಾಣಪಟ್ಟಣ

ಒಂದು ಪಣತಿಯಂತೆ, ಭಕ್ತಿಯೆಂಬುದೆ ಈ ಪಣತಿಯಲ್ಲಿ ಹಾಕಿದ ಎಣ್ಣೆ, ಇನ್ನು ಇಂಥ ಪಣತಿಗೆ ಬತ್ತಿ ಎಂಥದ್ದು ಎಂದರೆ, ಶರಣರು ಹೊಸೆದ ಶಿವಾಚಾರದ ಬತ್ತಿ ಇರುತ್ತಿರಲು, ಅದೋ ಕಲ್ಯಾಣದ ಬಸವಣ್ಣನೆ ದಿವ್ಯತೆಯ ಬೆಳಕಿನ ದೀಪ್ತಿಯಾಗಿ ಉರಿಯುತ್ತಿದ್ದಾರೆ. ಅಲ್ಲಿ ಸತ್ಯರು, ಸಾತ್ವಿಕರು, ನಿತ್ಯರು, ನಿಜೈಕ್ಯರು, ಮಹಾಜ್ಞಾನಿಗಳು, ಪರಮಯೋಗಿಗಳು, ಶಿವಭಾವಸಂಪನ್ನರು, ಶಿವಲಿಂಗಪ್ರಾಣಿಗಳು, ಶಿವಪ್ರಸಾದ ಪಾದೋದಕ ಸಂಬಂದಿಗಳೆಂಬ ಅಸಂಖ್ಯಾತ ಭಕ್ತಣಗಣಂಗಳೆಲ್ಲರೂ ತೊಳಗಿ ಬೆಳಗುತ್ತಿದ್ದರಯ್ಯಾ ಬಸವಣ್ಣನೆಂಬ ಶಿವನ ಪ್ರಕಾಶದಲ್ಲಿ. ಜೀವನದ ಕತ್ತಲೆಯನ್ನು ದಾಟಿಸಿ ಶಿವಬೆಳಗಿನ ಸೀಮೆಗೆ ಕರೆದೊಯ್ದು ಮಾನವಕುಲಕೋಟಿಯನ್ನು 'ಅಸಂಖ್ಯಾತ' ಭಕ್ತಕೋಟಿಗೆ ಪರಿವರ್ತಿಸಿದ ಬೆಳಗು ಬಸವಣ್ಣನವರು ವಾಸಮಾಡಿಕೊಂಡಿದ್ದ ಕಲ್ಯಾಣಕ್ಷೇತ್ರ, ಅರವಂತೆಂಟು ಪುಣ್ಯಕ್ಷೇತ್ರಗಳಲ್ಲಿ ಪರಮಪುಣ್ಯಕ್ಷೇತ್ರ ಎನಿಸಿದ ಅವಿಮುಕ್ತಕ್ಷೇತ್ರವಾದ ಕಲ್ಯಾಣದಲ್ಲಿ ಎನ್ನ ಪರಮಾರಾಧ್ಯರು ಸಂಗನಬಸವಣ್ಣನವರ ಮಹಿಮೆಯನ್ನು ನೋಡಿರೆಂದು ಆನಂದದ ತುತ್ತತುದಿವೇರಿ ಭಕ್ತಿಯಿಂದ ನಮಿಸುತ್ತಾರೆ.

ಅಕ್ಕಮಹಾದೇವಿಯವರು ಅಲ್ಲಮಪ್ರಭುದೇವರ ವಚನವನ್ನೇ ಸ್ಮರಿಸುವಂತೆ ಬೆಳಕಿನಲ್ಲಿ ಬೆಳಗುತ್ತಾ ಕಿರಣಗಳಂತೆ ಸಂಚರಿಸುತ್ತಿರುವ ಅಸಂಖ್ಯಾತ ಭಕ್ತಗಂಣಗಳನ್ನು ಕಂಡು, ಇಂತಹ ಕಲ್ಯಾಣಕ್ಕೆ ಹೊಗುವುದು ಸಾಮಾನ್ಯರಿಗೆ ಸಾಧ್ಯವಿಲ್ಲ ಎನ್ನುತ್ತಾರೆ.

> "ಕಲ್ಯಾಣವೆಂಬುದಿನ್ನಾರಿಗೆ ಹೊಗಬಹುದು ?
> ಹೊಗಬಾರದು, ಅಸಾಧ್ಯವಯ್ಯಾ.
> ಆಸೆ ಆಮಿಷ ಅಳಿದಂಗಲ್ಲದೆ ಕಲ್ಯಾಣದತ್ತಲಡಿಯಿಡಬಾರದು.
> ಒಳಹೊರಗು ಶುದ್ಧನಾದಂಗಲ್ಲದೆ ಕಲ್ಯಾಣವ ಹೊಗಬಾರದು.
> ನೀನಾನೆಂಬುದ ಹರಿದಂಗಲ್ಲದೆ ಕಲ್ಯಾಣದ ಒಳಗು ತಿಳಿಯಬಾರದು.
> ಚೆನ್ನಮಲ್ಲಿಕಾರ್ಜುನಂಗೊಲಿದು ಉಭಯ ಲಜ್ಜೆ ಅಳಿದೆನಾಗಿ
> ಕಲ್ಯಾಣವಂ ಕಂಡು ನಮೋ ನಮೋ ಎನ್ನುತಿದ್ದೆನು."
>
> –ಅಕ್ಕಮಹಾದೇವಿ

ಕಲ್ಯಾಣವನ್ನೆಲ್ಲಾ ತನ್ನ ಧರ್ಮದ ರಕ್ಷೆಯಲ್ಲಿಟ್ಟು ಕಾಯುವ ಉದಾತ್ತತೆಯ ಸಂಕೇತವೆಂಬಂತೆ ಎತ್ತರವಾಗಿ ತಲೆಎತ್ತಿ ನಿಂತಿತ್ತು ಬಸವಾದಿ ಶರಣರ ಮಹಾಮನೆ. ಅಂಧಶ್ರದ್ಧೆಯ ಅಂಧಕಾರವನ್ನು ಹೋಗಲಾಡಿಸಿ ನಾಡಿಗೆಲ್ಲಾ ಧರ್ಮದ ಬೆಳಕನ್ನು ಬೀರುತ್ತಿರುವ ಅನುಭವ ಮಂಟಪ. ಅನುಭಾವದ ಮಹಾಮೇರು ಅಲ್ಲಮಪ್ರಭುದೇವರು ಅಧ್ಯಕ್ಷರಾಗಿ ಶೂನ್ಯಸಿಂಹಾಸನವನ್ನು ಅಲಂಕರಿಸಿದ ಮೇಲೆ ಅನುಭವ ಮಂಟಪಕ್ಕೆ ಜೀವಸಂಚಾರವಾದಂತಾಗಿತ್ತು. ಶಿವಾಚಾರ ವೇದ್ಯರು, ಶಿವಾಗಮ ಸಾಧ್ಯರು, ಶಿವಸಮಯ ಪ್ರಜ್ಞರುಗಳಲ್ಲದೆ, ಮತ್ತಾರೂ ಅಲ್ಲಿಲ್ಲ ನೋಡಿರಯ್ಯಾ. ಅಂತರಂಗ, ಬಹಿರಂಗ ಶುದ್ಧಿಯೊಂದಿಗೆ ನಾನೆಂಬ ಅಹಂಭಾವವನ್ನು ಅಳಿದುಕೊಂಡು, ದುರಾಶೆಗಳನ್ನೆಲ್ಲಾ ನಾಶಗೊಳಿಸಿಕೊಂಡು ನಿಶ್ಚಿಂತ ನಿರ್ಮಲ ರೂಪಾಗಿ ಇರುವವರಲ್ಲದೆ, ಪಾಪಿಗಳು, ಕೋಪಿಗಳು ಅಸತ್ಯರು, ಹೋಗಬಾರದು ಕಲ್ಯಾಣಕ್ಕೆ. ಅನಾಚಾರಿಯಾಗಿ ಕಲ್ಯಾಣಕ್ಕೆ ಹೊಕ್ಕೆಯಾದರೆ, ಶರಣರಸಂಗ ಬಾಲಬಾಯಧಾರೆ ನೋಡಿರಯ್ಯಾ! ಚನ್ನಮಲ್ಲಿಕಾಜುನಂಗೆ ಭಕ್ತಿಯಿಂದ ಶರಣೆಂದು ನಮಿಸಿ ಕಲ್ಯಾಣ ಪ್ರವೇಶಿಸಬೇಕು ಎನ್ನುತ್ತಾರೆ.

ಗೊಗ್ಗವ್ವೆಗೆ ಕಲ್ಯಾಣದಲ್ಲಿನ ಅನುಭವ ಮಂಟಪದಲ್ಲಿ ಮೇಲು ಕೀಳು ಜಾತಿಯ ಜಂಜಡವಿಲ್ಲ. ಹೆಣ್ಣು ಗಂಡು ಎಂಬ ಭೇದವಿಲ್ಲ. ಇಬ್ಬರ ಆತ್ಮ ಒಂದೇ ಇಬ್ಬರೂ ಸಮಾನರು, ಸಿರಿತನ ಬಡತನದ ಸೋಂಕಿಲ್ಲ, ಎಂದು ಭಾವಿಸುವ ಶರಣರ ಸಮಾನತೆಯ ಸಮಾಜವಾದದ ರೂಢಿಯು ಜಾರಿಯಲ್ಲಿರುವದರ ಮಹಿಮೆಯನ್ನು ಅರಿಯುತ್ತಿದ್ದಂತೆ ಆನಂದೋಲ್ಲಾಸವು ಉಕ್ಕಿ ಹರಿದು, ಹೃದಯ ತುಂಬಿ ಭಕ್ತಿಯ ಪರಾಕಾಷ್ಠೆಯಲ್ಲಿ ಮುಳುಗಿ ಬಿಡುತ್ತಾಳೆ. ಇನ್ನೂ ಅನುಭವ ಮಟಂಪದ ಅನುಭಾವ ಗೋಷ್ಠಿಯಲ್ಲಿ ಭಕ್ತಿ ಭಂಡಾರಿ ಅಪ್ಪ ಬಸವಣ್ಣನವರು, ಜಂಗಮತ್ವಕ್ಕೆ ಹೆಸರಾದ ಅಲ್ಲಮಪ್ರಭುದೇವರು, ಜ್ಞಾನನಿಧಿ ಚನ್ನಬಸವಣ್ಣನವರು, ಶಿವಯೋಗಿ ಸಿದ್ಧರಾಮೇಶ್ವರರು, ಮಡಿವಾಳ ಮಾಚಿತಂದೆಗಳು, ವೈರಾಗ್ಯನಿಧಿ ಅಕ್ಕಮಹಾದೇವಿ, ಮಹಾತಾಯಿ ನೀಲಾಂಬಿಕೆ, ಗಂಗಾಂಬಿಕೆಯರು, ಅಕ್ಕನಾಗಲಾಂಬಿಕೆ, ಅಕ್ಕಮ್ಮ, ಮೊದಲಾದವರು "ಎತ್ತ ನೋಡಿದಡತ್ತ ಶರಣರು"

ಶರಣ ಸಂಕುಲದಿಂದ ತುಂಬಿದ ಅನುಭವ ಮಂಟಪನೋಡುತ್ತಿದ್ದಂತೆ, ಗೊಗ್ಗವ್ವೆಯ ಕಣ್ಣಲ್ಲಿ ಸಂತೋಷದ ಭಾಷ್ಪಗಳು ಹರಿದಾಡಿದವು.

ಅಂತರಂಗದ ನಿಜಾತ್ಮದ ಜ್ಯೋತಿ

ಬಸವಣ್ಣನವರ ಮನಸ್ಸು ತುಂಬಾ ಉಲ್ಲಾಸದಿಂದ ಕೂಡಿತ್ತು. ದೇಶದ ವಿವಿಧ ಕಡೆಗಳಿಂದ ಶರಣರ ಆಗಮನವು ಬಸವಣ್ಣನವರಿಗೆ "ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ" ಶರಣರ ಬರವನ್ನು ಬಯಸುತ್ತಿದ್ದ ಅವರ ಹೃದಯ "ದಿನಕರನುದಯಕ್ಕೆ ಕಮಳ ವಿಕಸಿತವಾದಂತೆ" ಅರಳುತ್ತಿತ್ತು. ಅಂತೆಯೇ ಶರಣರ ಮನಗಳಲ್ಲಿ ಮನೆಮಾಡಿದ್ದ, ಅವರ ಸರಳ ನಡೆ-ನುಡಿಗಳಿಂದ ಶಿಸ್ತಿನ ಸಂಘಟನೆಯಿಂದ ಎತ್ತರದ ಆಲೋಚನೆಗಳಿಂದ. ಸ್ಪಷ್ಟ ನಿಲುವುಗಳಿಂದ, ಸಂಯಮದ ನಿರ್ಣಾಯಗಳಿಂದ, ನಿಸ್ವಾರ್ಥ ತ್ಯಾಗಗಳ ಸಂಬಂಧದಿಂದ ವಚನಕಾರರಲ್ಲೇ ವಿಶಿಷ್ಟ ವ್ಯಕ್ತಿತ್ವ ಪಡೆದ ಮಹಾಮಾನವೀಯತೆಗೆ ಮತ್ತೊಂದು ಹೆಸರಾದ ಗುರು ಬಸವಣ್ಣರವರನ್ನು ಕುರಿತು ಅಕ್ಕನಾಗಲಾಂಬಿಕೆಯವರು ತಮ್ಮ ವಚನದಲ್ಲಿ ಮನದುಂಬಿ ಕೊಂಡಾಡುತ್ತಾರೆ.

"ಬಸವ ಮಾಡಿದಡಾಯ್ತು ಭುವಿಗೆ ಭಕ್ತಿಯ ಬೆಳಕು.
ಬಸವ ಮಾಡಿದಡಾಯ್ತು ಗುರುಲಿಂಗಜಂಗಮ ಪೂಜೆ.
ಬಸವ ಮಾಡಿದಡಾಯ್ತು ಲಿಂಗಾಂಗ ಸಾಮರಸ್ಯದ ಸುಧೆಯು.
ಬಸವ ಮಾಡಿದಡಾಯ್ತು ಭಕ್ತ ಭಕ್ತರಲಿ ಸಮಭಾವ.
ಎನ್ನ ಕಂಗಳೊಳಗಿಂಬಾದ ಬಸವ,
ಎನ್ನ ಮನ ಭಾವಂಗಳೊಳಗಾದ ಬಸವ,
ಎನ್ನಂತರಂಗ ತುಂಬಿ ನಿಂದಾತ ಬಸವ.
ಹೊರಗೆ ಗುರುಬಸವನ ಕೀರುತಿ.
ಬಸವನ ಮಣಿಹವೇ ಎನ್ನ ಪ್ರಾಣವಿಂದಿಂಗೆ.
ಬಸವಣ್ಣ ಪ್ರಿಯ ಚೆನ್ನಸಂಗಯ್ಯನ ಸಾಕ್ಷಿಯಾಗಿ
ಬಸವಾ ಬಸವಾ ಜಯತು.
ಗುರುಸಂಗನ ಬಸವಾ ಜಯತು."

-ಅಕ್ಕನಾಗಮ್ಮ

ಬಸವಣ್ಣನವರು ಮರ್ತ್ಯಕ್ಕೆ ಅವತರಿಸಿ ಬಂದು ಮಾಡಿದ ಮಹಾತ್ಕಾರ್ಯವನ್ನು ಮಹಾತಾಯಿ ನಾಗಲಾಂಬಿಕೆಯುವರು ಹೃದಯಸ್ಪರ್ಶಿಯಾಗಿ ತಮ್ಮ ವಚನದಲ್ಲಿ ವಿವರಿಸುತ್ತಾರೆ. ಬಸವಣ್ಣನವರು ಭಕ್ತಿಯ ಬೆಳಕಿನಿಂದ ಈ ಭೂಮಿಯ ಮೇಲೆ ಅಜ್ಞಾನವೆಂಬ ಕತ್ತಲೆಯನ್ನು ಕಳೆಯಲು ಬಂದಿದ್ದವರು. ಅಷ್ಟಾವರಣಗಳನ್ನು ಕೊಟ್ಟು ಗುರು-ಲಿಂಗ-ಜಂಗಮ, ಎಂಬ ತ್ರಿವಿಧ ಪೂಜೆಗಳನ್ನು ಕಲಿಸಿಕೊಟ್ಟರು. ಅರಿವು, ಆಚಾರ, ಅನುಭಾವಗಳ ಕರ್ತೃಗಳೆಂದು ತಿಳುಹಿದವರು. ಬಸವೇಶನ್ನಿಂದಲೇ ಭಕ್ತಿಯ ಬೆಳಕು, ಮುಕ್ತಿಯ ಮಾರ್ಗ. ಲಿಂಗಾಂಗಸಾಮರಸ್ಯ ನಿಜಸುಖದ ಸುಧೆಯನ್ನು ಅರುಹಿ, ಎನ್ನ ಕಂಗಳಲ್ಲಿ, ಎನ್ನ ಭಾವಂಗಳಲ್ಲಿ, ಎನ್ನ ಅಂತರಂಗದಲ್ಲಿ ತುಂಬಿಕೊಂಡ ಬಸವಣ್ಣನು ಎನ್ನ ಸರ್ವಾಂಗದಲ್ಲಿ ನಿಂದು ಎನ್ನೊಳಗೆ ಬಸವೇಶನೆ ತುಂಬಿಕೊಂಡಿದ್ದಾನೆ. ಎಲ್ಲಾ ಕಡೆಗೂ ಸಂಗನಬಸವನ ಕೀರ್ತಿ ಪಸರಿಸಲಿ ಬಸವಣ್ಣನ ಮಹಾಮಣಿಹ ಪೂರೈಸುವದೇ ನಮ್ಮ ಜೀವನದ ಗುರಿ, ಬಸವನ ಆಜ್ಞೆ ಪಾಲಿಸುವುದೆ ನನ್ನ ಕಾಯಕ ಮತ್ತು ಸಾಧನೆ. ಜಯತು, ಜಯತು ಎನ್ನುತ್ತಾ ತಾಯಿಯಂತೆ ಮಮತೆಯ ಸುಧೆಯೆ ಹರಿಸುತ್ತಾರೆ ಅಕ್ಕನಾಗಮ್ಮನವರು.

ಸ್ತ್ರೀಕುಲೋದ್ಧಾರಕ ಬಸವಣ್ಣನವರ ಆಂದೋಲನದ ಚಳವಳಿಯಲ್ಲಿ ಅಕ್ಕನಾಗಮ್ಮ, ಅಕ್ಕಮಹಾದೇವಿ, ನೀಲಾಂಬಿಕೆ, ಗಂಗಾಂಬಿಕೆಯರು ಭಾಗವಹಿಸಿದಂತೆ ಗೊಗ್ಗವ್ವೆಯರೊಡಗೂಡಿ ಅಕ್ಕಮ್ಮನವರಂಥ ಅನೇಕ ವಚನಕಾರ್ತಿಯರು ವಚನರಚನೆಗಳ ಮೂಲಕ ಅಕ್ಷರ ಲೋಕದಲ್ಲಿ ತಮ್ಮ ದಾಖಲಾತಿಯನ್ನು ಮಾಡಿದ್ದಾರೆ. ವಚನಕಾರ್ತಿಯರು ಶರಣರ ಹೊಸ ಸಮಾಜವನ್ನು ನಿರ್ಮಿಸುವಲ್ಲಿ, ಸಂಘಟನಾತ್ಮಕ ಕಾರ್ಯಗಳಲ್ಲಿ ಸಮಸಮವಾಗಿ ಭಾಗವಹಿಸಿದ್ದಾರೆ. ವಚನಕಾರ್ತಿ ಅಕ್ಕಮ್ಮನ ಜೀವನದಲ್ಲಿ ತ್ರಿಕರಣ ಶುದ್ಧಿಯ ನೇಮ, ವ್ರತಶೀಲಗಳಿಗೆ ಆದ್ಯತೆ ಕೊಟ್ಟಿರುವುದು ಕಾಣುತ್ತೇವೆ.

> "ಏಳುನೂರೆಪ್ಪತ್ತು ಅಮರಗಣಂಗಳಿಗೆಲ್ಲಕ್ಕೂ ತಮ್ಮ ತಮ್ಮ ಭಾವದಶೀಲ.
> ಗಂಗೆವಾಳುಕ ಸಮಾರುದ್ರರೆಲ್ಲಕ್ಕೂ ತಮ್ಮ ತಮ್ಮ
> ಮನಕ್ಕೆ ಸಂದ ಸಂದ ನೇಮ.

ಮರ್ತ್ಯಕ್ಕೆ ಬಂದ ಪ್ರಮಥರೆಲ್ಲರೂ ತಾವು ಬಂದುದನರಿದು
ಮುಂದಿನ ಪಯಣಕ್ಕೆ ಎಂದೆಂಬುದ ಕಂಡು,
ಬಸವಣ್ಣನ ಮಣಿಹ ಎಂದಿಂಗೆ ಸಲೆ ಸಂದು
ನಿಂದಿಹ ವೇಳೆಯನರಿಯದನ್ನಕ್ಕ
ತಾವು ಕೊಂಡ ವ್ರತದಲ್ಲಿ ಭಯ ಭಂಗವಿಲ್ಲದೆ ನಿಂದಿರಬೇಕು,
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದೊಳಗಹನ್ನಕ್ಕ."

–ಅಕ್ಕಮ್ಮ

ಏಳುನೂರಾ ಎಪ್ಪತ್ತು ಅಮರಗಣಂಗಳೆಲ್ಲರೂ ತಮ್ಮ ತಮ್ಮ ಸಾಧನೆಯ ಮಾರ್ಗದಲ್ಲಿ ಅವಲಂಬಿಸಿದುದು ತಾತ್ವಿಕ ಹಿನ್ನಲೆಯನ್ನು ತಾತ್ವಿಕ ಜಿಜ್ಞಾಸೆಯ ಮಟ್ಟದಲ್ಲಿ ನಿಲ್ಲಿಸದೆ ಅನುಭಾವದಿಂದ ಆನಂದದತ್ತ ಮುನ್ನಡೆಸಿರುವರು. ತಾವು ಮರ್ತ್ಯಕ್ಕೆ ಬಂದುದನ್ನು ಅರಿತು, ಗುರು ಬಸವಣ್ಣನವರ ಪ್ರಧಾನವಾದ ಅಷ್ಟಾವರಣ ಮಾರ್ಗವಾಗಿ ಭಕ್ತಿ, ಜ್ಞಾನ, ಕ್ರಿಯೆಗಳು ಇಲ್ಲಿ ಮುಪ್ಪುರಿಗೊಂಡು ಸಾಮರಸ್ಯಕ್ಕೇರಿಸುವ ನಿಚ್ಚಣಿಕೆಯನ್ನು ನಿರ್ಮಿಸಿವೆ. ಅಕ್ಕಮ್ಮನ ಪ್ರಕಾರ ಅರಿವು ಎಷ್ಟು ಮುಖ್ಯವೊ ಆಚಾರವೂ ಅಷ್ಟೇ ಮುಖ್ಯ. ಶರಣ ಕೇವಲ ತತ್ತ್ವಜ್ಞಾನಿಯಾಗುವುದು ಅಥವಾ ಕ್ರಿಯಾಶೀಲನಾಗುವುದು ಮುಖ್ಯವಲ್ಲ. ಜ್ಞಾನ ಹಾಗೂ ಕ್ರಿಯೆಗಳ ಸಮನ್ವಯ ಮುಖ್ಯವಾಗುತ್ತದೆ. ಈ ವಚನ ಚಳವಳಿಯೆಂಬ ಪಯಣದಲ್ಲಿ ಬಸವಣ್ಣನವರು ಕೈಕೊಂಡ ಮಣಿಹದ ಆಳವನ್ನು ಅರಿತು, ಯಾವ ಭಯ ಭಂಗವಿಲ್ಲದೆ, ಜ್ಞಾನ ಮತ್ತು ಕ್ರಿಯೆ, ಅಂದರೆ ಆಚಾರವನ್ನೇ ಪ್ರಾಣವಾಗಿಸಿಕೊಂಡು ನಿಲ್ಲಬೇಕು ಎನ್ನುತ್ತಾಳೆ.

ಅನುಭವ ಮಂಟಪದ ಶರಣರಲ್ಲಿ ಹಿರಿಯ ಮಹಿಳಾ ವಚನಕಾರ್ತಿಯಾದ ದುಗ್ಗಳೆಯವರು ಸತ್ಯಶರಣರು ನುಡಿದಂತೆ ನಡೆಯುವ ಮಹಾಶಿವಶರಣರು ಅವರ ಕರುಣಪ್ರಸಾದದಿಂದ ನಮ್ಮ ಜೀವನವು ಉದ್ಧಾರವಾಯಿತು. ಬಸವಾದಿ ಶರಣರು ಎಂಥ ಮಾರ್ಗದರ್ಶಕರು, ಬಸವಣ್ಣನವರ ಮಣಿಹದಲ್ಲಿ ನಾವು ಪಾಲ್ಗೊಂಡಿರುವುದೇ ನಮ್ಮ ಭಾಗ್ಯ. ಅವರಲ್ಲಿನ ಆಧ್ಯಾತ್ಮಿಕ ಪ್ರೇರಣಾ ಶಕ್ತಿ ಎಂಥ ಅದ್ಭುತವಾಗಿದೆ ಎಂದು ತಮ್ಮ ವಚನದಲ್ಲಿ ಹೇಳುತ್ತಾರೆ.

"ಭಕ್ತನಾದಡೆ ಬಸವಣ್ಣನಂತಾಗಬೇಕು.
ಜಂಗಮವಾದಡೆ ಪ್ರಭುದೇವರಂತಾಗಬೇಕು.
ಯೋಗಿಯಾದಡೆ ಸಿದ್ಧರಾಮಯ್ಯನಂತಾಗಬೇಕು.
ಭೋಗಿಯಾದಡೆ ಚೆನ್ನಬಸವಣ್ಣನಂತಾಗಬೇಕು.
ಐಕ್ಯನಾದಡೆ ಅಜಗಣ್ಣನಂತಾಗಬೇಕು.
ಇಂತಿವರ ಕಾರುಣ್ಯಪ್ರಸಾದವ ಕೊಂಡು
ಸತ್ತುಹಾಗಿರಬೇಕಲ್ಲದೆ ತತ್ವದ ಮಾತು ಎನಗೇಕಯ್ಯಾ
ದಾಸಯ್ಯಪ್ರಿಯ ರಾಮನಾಥ ?"

–ದುಗ್ಗಳೆ

ಭಕ್ತಿಭಂಡಾರಿ ಬಸವಣ್ಣನವರು ಗುರುಭಕ್ತರಾದವರು, ಲಿಂಗಭಕ್ತರಾದವರು, ಜಂಗಮ ಭಕ್ತರಾದವರು. ಗುರು–ಲಿಂಗ–ಜಂಗಮ ಭಕ್ತಿಯನ್ನು ಕಲಿಸುತ್ತಾ, ಶರಣಸಂಕುಲವನ್ನು ಸಲಹಿದರು. ಪ್ರತಿಯೊಂದು ಜೀವರಾಶಿಯಲ್ಲಿ ಸಂಗಮನಾಥನನ್ನು ಕಾಣುತ್ತಾ, ಶುದ್ಧ, ಸಿದ್ಧ, ಪ್ರಸಿದ್ಧ ಭಕ್ತರಾದವರು ಬಸವಣ್ಣನವರು. ಭಕ್ತರೆನಿಸಿಕೊಂಡವರು ಎಷ್ಟಿದ್ದರೇನು! ಬರೀ ಮಾತಿನಲ್ಲಿ ಭಕ್ತರೆಂದರೆ ಸಾಲದು, ಭಕ್ತ ಹೇಗಿರಬೇಕು ಎಂಬುದನ್ನು ಬಸವಣ್ಣನವರನ್ನು ನೋಡಿ ಕಲಿಯಬೆಕು. ಜಂಗಮವೆಂದರೆ ಜಗದ್ಭರಿತವಾದ ತತ್ತ್ವ ಸರ್ವವ್ಯಾಪಕತ್ವವಿರುವ ಮಹಾತತ್ತ್ವ, ಜಂಗಮ ಒಂದೆಡೆಗೆ ನಿಲ್ಲದೆ, ದಿಕ್ಕು ದಿಕ್ಕಿನಲ್ಲಿ ಸಂಚರಿಸಿ, ಜಗವನ್ನುದ್ಧರಿಸುವ ಶಿವಸ್ವರೂಪವೇ ಈ ಜಂಗಮ. ಅಂತಹ ಜಂಗಮ ಹೇಗಿರಬೇಕು ಎಂಬುದನ್ನು ಅಲ್ಲಮಪ್ರಭುದೇವರನ್ನು ನೋಡಿ ಕಲಿಯಬೇಕು. ಇವರೆಲ್ಲರ ಮಾರ್ಗವಿಡಿದು,ಲಿಂಗಾಂಗ ಸಾಮರಸ್ಯದ ಸವಿಯಲ್ಲಿ ಓಲಾಡುತ್ತಿರುವ ಮಹಾಶಿವಯೋಗಿ ಸಿದ್ಧರಾಮೇಶ್ವರಂತೆ ಯೋಗಿ ಆಗಬೇಕಾದರೆ ಸಿದ್ಧರಾಮಯ್ಯರನ್ನು ನೋಡಿ ಕಲಿಯಬೇಕು. ಚನ್ನಬಸವಣ್ಣನವರು ಮಹಾಪ್ರಸಾದಿಗಳು. ಪ್ರಸಾದ ಭೋಗದ ರಹಸ್ಯವನ್ನು ಚನ್ನಬಸವಣ್ಣನವರು ಮಾತ್ರ ಬಲ್ಲರು. ಸರ್ವಭೋಗಾದಿ ಭೋಗವನ್ನು ಲಿಂಗಕ್ಕೆ ಕೊಡುವ ವಿಧಾನವನ್ನು ಚನ್ನಬಸವಣ್ಣನವರನ್ನು ನೋಡಿ ಕಲಿಯಬೇಕು. ಇನ್ನೂ ಐಕ್ಯನಾದರೆ ಹೇಗೆ ಎಂದರೆ, ಎರಡೆಂಬುವದು ಅಳಿದು ಒಂದೇಯಾಗಿ,

ಮನಮುಗ್ದನಾಗಿ ಮೌನಿಯಾಗಿರುವ ಐಕ್ಯಭಾವವನ್ನು ಅಜಗಣ್ಣನವರಿಂದ ಕಲಿಯಬೇಕು

ದುಗ್ಗಳೆತಾಯಿಯವರು ತಮ್ಮ ವಚನದಲ್ಲಿ ಬಸವಣ್ಣನವರ, ಅಲ್ಲಮಪ್ರಭುದೇವರ, ಚನ್ನಬಸವಣ್ಣನವರ, ಸಿದ್ಧರಾಮಯ್ಯನವರ, ಅಜಗಣ್ಣರಾದಿ ಮಹಾಶಿವಶರಣರ ಕರುಣೆಯಿಂದ ತಾನು ಮಹಾಪ್ರಸಾದಿಯಾದೆನು ಎಂದು ಅತ್ಯಂತ ವಿನಯದಿಂದ ನುಡಿದಿದ್ದಾರೆ.

ಅನುಭಾವ ಗೋಷ್ಠಿಯ ಮಹಾಭಾಗ್ಯ

ಅನುಭವ ಮಂಟಪದಲ್ಲಿ ಅಂದಿನ ಅಧ್ಯಕ್ಷತೆ ವಹಿಸಿದ್ದ ಹಡಪದ ಅಪ್ಪಣ್ಣನವರು. ಅಸಂಖ್ಯಾತ ಪ್ರಮಥ ಗಣಂಗಳೆಲ್ಲರೂ ನೆರೆದಿದ್ದರು. ಮಾನವಕುಲವು ಭವಚಕ್ರದಲಿ ಸಿಲುಕಿ ಭವಿಯಾದವರ ಉದ್ಧರಿಸಬೇಕು. ಜಗತ್ತಿನಲ್ಲಿಯ ಮಾನವರು ಕುಲ ಜಾತಿಗಳನ್ನೆಲ್ಲ ಹರಿದು, ಪುಣ್ಯಪಾಪವ ತೊಡೆದು, ವೇದವೇದಾಂತ ಲೌಕಿಕ ಆಗಮ ದರ್ಶನಗಳ ಧರ್ಮದೊರೆಯಲ್ಲಿ ತಿಕ್ಕಿ ಲೋಕಾಚಾರಗಳ ಕುರುಡುನಂಬಿಕೆಯನ್ನು ಕಿತ್ತೆಸೆದು, ಆಚರಿಸುತಿಹ ಅನಾಗರಿಕ ಸಂಪ್ರದಾಯಗಳ ಕಡಿದೊಗೆದು, ಮಾನವನೆದೆಯ ಹದಮಾಡಿ ಮಾನವಕುಲವನ್ನೆತ್ತಲು ಮಾನವೀಯತೆಯ ಶರಣಧರ್ಮವು ಬೆಳಕೇ ಬೆಳಗಾಗಿ ಹೊಳೆಯುತ್ತಿತ್ತು. ಅಲ್ಲಮಪ್ರಭುಗಳು ಬಸವಣ್ಣನವರು ಎಂಥ ಭಕ್ತಿಯ ಬೆಳಗಿನ ಜ್ಯೋತಿ ಎಂದು ನುಡಿದಿದ್ದಾರೆ.

**"ಕಾಯಗೊಂಡು ಹುಟ್ಟಿದವರು ದೇವರಾದಡಾಗಲಿ,
ಈವರಾದಡಾಗಲಿ,
ಮಾಯೆಯ ಸಾಧಿಸಿ ಗೆಲುವುದುರಿದು ನೋಡಾ.
ಮನದ ತಮಂಥವ ಗೆಲಿದು,
ನೆನೆದು ಸುಖಿಯಾದಿಹೆನೆಂಬವರ ಬೆಂಬತ್ತಿ ಕಾಡಿತ್ತು ಕರ್ಮ.
ಗುಹೇಶ್ವರಲಿಂಗವ ಕಿರಿಕಿರಿದಾಗಿ ನೆನೆದರೆ
ಹಿರಿಹಿರಿದಾಗಿ ಕಾಡುವುದು ನೋಡಾ ಮರಹು!
ಸಂಗನಬಸವಣ್ಣಾ, ನೀ ನೆನೆದ ನೆನಹು ಆರಂತಹದಲ್ಲ ನೋಡಾ."**

–ಅಲ್ಲಮಪ್ರಭುದೇವರು

ಬಸವಣ್ಣಾ ನಿನ್ನ ನೆನಹಿನ ರೀತಿ ಏನೋ ಬೇರೊಂದು ರೀತಿಯಾಗಿದ್ದಂತೆ ತೋರುತ್ತದೆ. ದೇಹವನ್ನು ಧರಿಸಿಕೊಂಡು ಭವಚಕ್ರದಲ್ಲಿ ಸಿಲುಕಿದವರು ದೇವರಿರಲಿ, ಯಾರೇ ಇರಲಿ, ಮಾಯೆಯನ್ನು ಮೀರುವುದು ಅಸಾಧ್ಯ. ದೇಹಕ್ಕೆ ಅಂಟಿಕೊಂಡಿದ್ದ ಮನದ ಕತ್ತಲೆಯ ವ್ಯವಹಾರವನ್ನು ದಾಟಿ, ಆಚೆ ನಿಂದು ಮಹಾಘನವನ್ನು ನೆನೆದು ಆನಂದದ ಸೀಮೆಯಲ್ಲಿ ನಡೆವೆನೆಂದರೆ, ಮಾಡಿದ ಕರ್ಮ ಮುಂದೆ ಹಜ್ಜೆ ಇಡಗೊಡುವುದಿಲ್ಲ. ಸ್ವಲ್ಪ ನೆನೆದರೆ ಸಾಕು, ಹೆಚ್ಚು ಹೆಚ್ಚಾಗಿ ತನ್ನನ್ನು ಮರೆಯಿಸಿಕೊಳ್ಳುತ್ತದೆ. ತನ್ನ ನಿಜವಾದ 'ಗುಹೇಶ್ವರ' ಲಿಂಗವು ಜಗದ ಕಣ್ಣಿಗೆ ಕತ್ತಲೆಯ ಕವಿಸಿ ತನ್ನ ತಪ್ಪಿಸಿಕೊಂಡಿಪ್ಪ ಭೇದ ನಿನ್ನೊಳಗೆ ಅಡಗಿದ ಪರಿ ಎಂತು ಹೇಳಾ ಸಂಗನಬಸವಣ್ಣಾ! ನಿಮ್ಮ ಸ್ಮರಣೆಯ ಘನದ ಮುಂದೆ ಮಾಯೆ ನಿಲಲರಿಯದು. ನಿಮ್ಮ ನೆನಹ ಮೀರುವ ಘನವ ಅರಿತರೆ ತಿಳುಸಿರೆಂದು ಭಿನ್ನಯಿಸುವೆ ಚೆನ್ನಬಸವಣ್ಣಾ ಎಂದು ಅಲ್ಲಮಪ್ರಭುಗಳು ನುಡಿಯುತ್ತಾರೆ.

ಚನ್ನಬಸವಣ್ಣನವರ ಕಂಗಳ ಕಾಂತಿ ಬೆಳಗಿನ ತಿರುಳು. ಈ ಕಾಂತಿಯಲ್ಲಿ ಬಸವಣ್ಣನೆಂಬ ಹೊಳಹು ಹೊಳೆಯುತ್ತಿತ್ತು. ಒಳಗೂ ಹೊರಗೂ ಕೂಡಿ ಒಂದಾದ ಕೂಟಸ್ಥಲ ಅದೇ ನಿಜಸ್ಥಲ, ಅದೇ ಒಳಹೊರಗನ್ನು ನುಂಗಿದ ನಿಶ್ಚಿಂತ ನಿರಾಳ ನಿಜಲುಂಡು ಪ್ರಸನ್ನ ಪ್ರಸಾದವಾಗಿರುವ 'ನಿರ್ಮಳ ಘನ' ಚನ್ನಬಸವಣ್ಣನವರನ್ನು ಪ್ರಭುದೇವರು ಕಂಡು ಬೆರಗಾದ ಮೂರ್ತಿ. ಅವರನ್ನು ಬಸವಣ್ಣನವರ ಭಕ್ತಿ ಮತ್ತು ಜಂಗಮದರ್ಶನ ಮಾಡಿಸು ಎನ್ನುತ್ತಾರೆ.

ಜಂಗಮಪ್ರೇಮಿ ಭಕ್ತಿಯ ಮೂರ್ತಿಯೆ ಬಸವಣ್ಣನವರು ಪ್ರಭುವೆ. ಈ ಮೂರ್ತಿಯ ಮಹಾತ್ಮೆಯನ್ನು ಶಬ್ದದಲ್ಲಿ ಹೇಳುವುದಾದರೂ ಹೇಗೆಂದು ತಿಳಿಯದಾಗಿದೆ. ದೇವನ ಅನುಗ್ರಹದ ಅಪ್ಪಣೆಯಂತೆ ಏಳುನೂರಾ ಎಪ್ಪತ್ತು ಅಮರಗಣಂಗಳ ಸಹಿತ ಮರ್ತ್ಯಕ್ಕೆ ಬಂದ ಬಸವಣ್ಣ, ಗುರು, ಲಿಂಗ, ಜಂಗಮಕ್ಕೆ ಭಕ್ತಿಯನ್ನು ಮಾಡಿ ಭಕ್ತಿಯ ಗಂಭೀರವನ್ನು ಮಾನವಲೋಕಕ್ಕೆ ತೋರಿಸಿದರು. ನುಡಿದಂತೆ ನಡೆದು ತೋರಿ 'ಲೋಕಾದಿಲೋಕಂಗಳಿಗೆ ಪರಮಗುರುವಾದರು. ಕಲ್ಯಾಣದ ಬಿಜ್ಜಳನ ಸಿಂಹಾಸನದ ಕೆಳಗೆ ಇರುವ

ನಿಧಿಯನ್ನು ತೆಗೆಸಿ, ಹೊರಗೆ ಬಿಜ್ಜಳನಿಗೆ ಭಂಡಾರಿಯಾದರು. ಒಳಗೆ ಶಿವನ ಭಂಡಾರಿಯಾದರು.

"ಭಕ್ತಿಯ ಕುಳಸ್ಥಳವ ಮರ್ತ್ಯಲೋಕದಲ್ಲಿ
ಹರಹಲೆಂದು ಬಂದನಯ್ಯಾ ಬಸವಣ್ಣನು.
ಆಚಾರದ ಶಿವಾಚಾರದ ಮುಂದಣ ಕನ್ನಡಕವ ಕಳೆದು
ಕರತಳಾಮಳಕವ ಮಾಡಿದನಯ್ಯಾ ಬಸವಣ್ಣನು.
ಪರವಾದಿ ಬಿಜ್ಜಳನು ಒರೆಗಲ್ಲ ಹಿಡಿದು
ಶಿವಭಕ್ತಿಯ ಸಂಪಾದನೆ ಮಾಡುವಲ್ಲಿ,
ಮೂವತ್ತಾರು ಕೊಂಡೆಯರ ಪರಿಹರಿಸಿ
ಶಿವಾಚಾರದ ಧ್ವಜವನೆತ್ತಿಸಿದನಯ್ಯಾ ಬಸವಣ್ಣನು.
ಕೂಡಲಚೆನ್ನಸಂಗಮದೇವರಲ್ಲಿ ಬಸವಣ್ಣನ ನಿಲವ ಹೊಗಳುವರೆ
ಎನ್ನಳವಲ್ಲ, ನಿನ್ನಳವಲ್ಲ ಕೇಳಾ ಪ್ರಭುವೆ!"

–ಚನ್ನಬಸವಣ್ಣನವರು

ಬಸವಣ್ಣನವರು ಧೀಡಿರನೆ ಎದ್ದು ನಿಂತು, ಶಿರಬಾಗಿ ನಮಿಸುತ್ತಾ ನಾನು ಕಲ್ಯಾಣದಲಿ ಬೆಳೆಕೆಲ್ಲ ಬೆಳೆದ ಬೆಳಕಿನ ಬೀಜಗಳನ್ನು ಕಂಡಿದ್ದೇನೆ. ನಿಮ್ಮ ಸತ್ಯಶರಣರ ಬರವು, ಅವರ ಸಂಗ, ಒಡನಾಟದಿಂದ ಅಂಕುರಿಸಿ, ಪಲ್ಲವಿಸಿ, ಪಸರಿಸುತ್ತಿರುವ ಸಂಗಾನಂದವು ಎನ್ನೊಳಗೆ ತುಂಬಿ ತುಳುಕುತ್ತಿದೆ. ಶರಣಗಣಂಗಳ ಲಿಂಗಾರ್ಚನೆ, ಲಿಂಗಪೂಜೆ, ಲಿಂಗಾರ್ಪಣ, ಲಿಂಗಪ್ರಸಾದ, ಲಿಂಗಪ್ರಸನ್ನ ಶರಣರ ಭಕ್ತಿಸೇವೆ, ದಾಸೋಹಂಭಾವ ಇವೆಲ್ಲವು ಅನುಭವ ಮಂಟಪದಲ್ಲಿ ನವ್ಯಾನಂದದ ಮಾದರಿತನವನ್ನು ಸೃಷ್ಟಿಸಿತ್ತು. ಅದರಿಂದ ಬಸವಣ್ಣನವರಿಗೆ ಮನಭಾವ ತುಂಬಿ ಉಕ್ಕಿ ಬಂದಿತ್ತು.

"ಸಸಿಯ ಮೇಲೆ ಸಾಗರವರಿದಂತಾಯಿತ್ತಯ್ಯಾ, ಎನ್ನ ಭಕ್ತಿ.
ಆನಂದದಿಂದ ನಲಿನಲಿದಾಡುವೆನು.
ಆನಂದದಿಂದ ಕುಣಿಕುಣಿದಾಡುವೆನು.
ಕೂಡಲಸಂಗನ ಶರಣರು ಬಂದಡೆ,
ಉಬ್ಬಿ, ಕೊಬ್ಬಿ, ಹರುಷದಲೋಲಾಡುವೆ."

–ಬಸವಣ್ಣನವರು

ಶರಣರು ಬಂದರೆ, ಸಸಿಯ ಮೇಲೆ ಸಾಗರ ಹರಿದ ಆನಂದ ಬಸವಣ್ಣನವರಿಗೆ ಅವರಿಗೆ ಶರಣರ ಸಂಗವೆಂದರೆ ಭಿನ್ನತೆಯು ಕಾಂತಿಯುಂಟಾಗುತ್ತದೆ. ಶರಣರೊಡನೆ ಸಮಗೋಷ್ಠಿ 'ನಿಮ್ಮ ಧರ್ಮದ ಕವಿಲೆ' ಯಾದ ಬಸವಣ್ಣನ ಸರ್ವಾಂಗ ಲಿಂಗಶುದ್ಧಿಯ ಭಕ್ತಿಯಲ್ಲಿ ಏನು ಕೃತಜ್ಞತಾಭಾವ ಹೊಮ್ಮುತ್ತಿದೆ! ಕೂಡಲಸಂಗಮದೇವಾ, ನಿಮ್ಮ ಶರಣ ಪ್ರಭುದೇವರ ಕೃಪೆಯಿಂದ ಎನಗೊದಗಿದ ಘನವ ಏನೆಂದು ಪಮಮಿಸುವೆನು! ಚೈತನ್ಯ ಕೋಟಿಗಳ ಚೇತನಿಸಿ ಕೊಟ್ಟಿರುವ ದಿವ್ಯಮಹಾಘನ ಜ್ಞಾನ ಶರಣತ್ವವೆಂಬುದು. ತಾನೆ ತಾನಾದ ಮಹಾನಂದ ಬೀಜವು ಕಾಯಕ, ದಾಸೋಹ, ಪ್ರಸಾದವೆಂದಾಗಿ ಘಮಘಮಿಸುತ್ತಿದೆ. ಬಯಲೊಳಗೆ ಬಯಲಾದ ಮಹಾಬಯಲು ಚಿಜ್ಯೋತಿ ಕೋಟಿ ಪ್ರಕಾಶಗಳ ಹೆತ್ತು ಲಾಲಿ ಹಾಡುತ್ತಾ, ಬದುಕಿನಾಶೆಯ ಕಳೆದುಕೊಂಡ ಜನಕೋಟಿಯ ಎದೆಗೆ ಸಾಗರದಷ್ಟು ಆಶಾಭಾವಗಳು ಚಿಗುರಿಸಿದೆ. ಅದರಿಂದಾಗಿ ಬಾಡಿದ ಎದೆಸಸಿಯೆಲ್ಲಾ ನಳನಳಿಸುವಂತೆ ಮಾಡಿದವರು ಕೂಡಲಸಂಗನ ಶರಣರ ಅನುಭಾವದಿಂದ. ನಿಮ್ಮೆಲ್ಲರ ಒಲವಿನಿಂದ ನಡೆಸಿದೆಯೆನ್ನ ಸರಿದಾರಿಯಲಿ ಇಲ್ಲಿಯತನಕ, ಇದಕ್ಕೆಲ್ಲ ನೀವೆಲ್ಲರೂ ಕಾರಣರು.

> **"ಸಜ್ಜನ ಶರಣರ ಕಂಡು ಎನ್ನ ಮನ ಉಬ್ಬಿತ್ತು ನೋಡಿರಯ್ಯಾ.**
> **ಶ್ರೀಗುರುಪಾದವ ಹಿಡಿದು ಪಾವನನಾದೆನಯ್ಯಾ**
> **ಪಾದೋದಕ ಪ್ರಸಾದದಿಂದ ಭವಗೆಟ್ಟೆನು**
> **ಕೂಡಲಸಂಗಮದೇವಾ."**
>
> **–ಬಸವಣ್ಣನವರು**

ಸಜ್ಜನ ಶರಣರನ್ನು ಕಂಡಂತೆ ನನ್ನ ಮನವು ಸಂತೋಷಗೊಳ್ಳುವುದು. ನನ್ನ ಎಲ್ಲಾ ಕಾಯಕಕ್ಕೆ ನಿಮ್ಮೆಲ್ಲರ ಒಲವು ಉಕ್ಕಿ ಹರಿವುದು. ಜಗದ ಸುಖದುಃಖ ವಿಷಮ ಪರಿಸ್ಥಿತಿಗಳನ್ನೆಲ್ಲಾ ಎದುರಿಸುತ್ತಾ, ಅರಿವಿನಿಂದ ಆಚಾರದ ನುಡಿಗಳೆ ಶರಣರದು. ಜಗವವನ್ನೆಲ್ಲಾ ಆವರಿಸಿದ ಈ ಮಹಾಮಾಯೆಯ ಅಂಧಕಾರವನ್ನು ಕಳೆದು ಮಾನವರ ಎದೆಯಲಿ ಶಿವಭಕ್ತಿ ಎನ್ನುವ ಪರಿಶುಭ್ರ ಪ್ರಕಾಶವ ಬೆಳಗುವ ಆಶೆ ಎನ್ನದು. ಜ್ಞಾನಕಿರಣದ

ಬೆಳಗು ಕತ್ತಲೆಯ ಕೋಟೆಯಲಿ ಬಿರುಕ ಮೂಡಿಸಿ ಮಾನವರು ಮಾನವೀಯತೆಯ ನಿಜದೆಡೆಗೆ ಸಾಗಬೇಕೆನ್ನುವ ಬಯಕೆಯಿಂದ ಮುನ್ನಡೆಯುತ್ತಿದ್ದವನು. ಜಗತ್ತಿನ ಕಷ್ಟನಷ್ಟವ ಸುಟ್ಟು ಹಾಕಬೇಕೆಂಬ ಇಚ್ಛೆಯಲ್ಲಿ ನೀವೆಲ್ಲ ನನ್ನೊಡನೆ ಕೈಜೋಡಿಸಿ ಜ್ಯೋತಿ ಮುಟ್ಟಿದ ಜ್ಯೋತಿಯಾಗಿ ಬೆಳಗಿ, ಜಗವೆಲ್ಲ ಬೆಳಗಾಗಿ ಪರಮ ಸತ್ಯದ ಇರವ ತೋರಿಸಲು ಎಲ್ಲೆಡೆ ಲಿಂಗಬೆಳಕು ಧುಮ್ಮಿಕ್ಕಿ ಹರಿಯುತ್ತಾ ಲಿಂಗತೇಜದ ಮಹಾಪುರವೇ ಹರಿದುಬಂದು ಕಲ್ಯಾಣದಲ್ಲಿ ಥಳಥಳಿಸಿ ಹೊಳೆಯುತ್ತಿರುವುದು.

ಕಾಯಕದೊಡನೆ ವಚನ ಸಂಭ್ರಮ

ಶರಣರ ಬೀಡಾದ ಕಲ್ಯಾಣದ ಶರಣ ಶರಣೆಯರಲ್ಲಿ ವ್ರತಾಚಾರಗಳಿಗೇನೂ ಕೊರತೆಯಿರಲಿಲ್ಲ. ಅಂತಹ ಮಹಾನ್ ಶರಣೆಯರಲ್ಲಿ ಶರಣೆ ಗೊಗ್ಗವ್ವೆಯು ಪ್ರಾಮುಖ್ಯತೆಯನ್ನು ಪಡೆದವರಲ್ಲಿ ಒಬ್ಬಳು. ಗೊಗ್ಗವ್ವೆಯ ವಚನಗಳಲ್ಲಿನ ದಿಟ್ಟತೆ, ನೇರ ನುಡಿ, ವ್ರತ ನೇಮಗಳು ಎಷ್ಟು ವರ್ಣಿಸಿದರೂ ಕಡಿಮೆಯೇ. ಸಾಧನೆಯ ಉನ್ನತಿಗೇರಲು ಸದ್ಗುರುವಿನ ಸಾನಿಧ್ಯಬೇಕು. ಅಂತೆಯೇ ದಿನಾಲು ಶರಣರ ಮನೆಗಳಿಗೆ ಹೋಗಿ ಧೂಪ ಹಾಕುವ ಕಾಯಕವನ್ನು ಮುಂದುವರೆಸುತ್ತಾಳೆ. ತನ್ನ ಕಾಯಕದೊಂದಿಗೆ ಅನುಭವ ಮಂಟಪದಲ್ಲಿ ಶರಣರೊಂದಿಗೆ ಬೆರೆತು, 'ನಾಸ್ತಿನಾಥಾ' ಎಂಬ ವಚನಾಂಕಿತದಿಂದ ರಚಿಸಿದ ಆರು ವಚನಗಳು ಮಾತ್ರ ಲಭ್ಯವಾಗಿವೆ. ನಾಸ್ತಿನಾಥಾ ಎಂದರೆ ಶೂನ್ಯದೇವ ಎಂದು. ಈ ಶೂನ್ಯದೇವನೇ ಎಲ್ಲದರ ಆದಿ ಮತ್ತು ಅಂತ್ಯ ಆಗಿದ್ದಾನೆ. ಎಲ್ಲವೂ ಇಲ್ಲಿಂದಲೇ ಹುಟ್ಟಿ ಕೊನೆಗೆ ಇಲ್ಲಿಯೇ ಲಯವಾಗುವುವು.

ಧೂಪದ ಕಾಯಕದ ಗೊಗ್ಗವ್ವೆ ಇಂಥ ನಾಸ್ತಿನಾಥನನ್ನೇ ಪತಿಯಾಗಿ ಸ್ವೀಕರಿಸಿದಳು. ದೇವರ ನಿಜರೂಪವನ್ನು ಅರಿಯಬೇಕಾದರೆ ಅರ್ಚನೆ, ಆರಾಧನೆಗಳನ್ನು ನಿತ್ಯ ನೇಮಗಳಾಗಿ ಮಾಡಿಕೊಳ್ಳಬೇಕಾಗುತ್ತದೆ. ಆವಾಗ ಸತ್ಯವೇ ನಿಜಸತ್ಯವಾಗಿ ಅಸತ್ಯವನ್ನು ಮರೆಮಾಡುವಲ್ಲಿ ಸಹಕರಿಸುತ್ತದೆ.

"ಉದ್ದವನೇರುವುದಕ್ಕೆ ಗದ್ದುಗೆ ಇಲ್ಲದೆ ಎಯ್ದಬಾರದು.
ಚಿದ್ರೂಪನನರಿವುದಕ್ಕೆ ಅರ್ಚನೆ ಪೂಜನೆ

ನಿತ್ಯ ನೇಮವಿಲ್ಲದೆ ಕಾಣಬಾರದು.
ಅದ ಸತ್ಯದಿಂದ ಮಾಡಿ ಅಸತ್ಯವ ಮರೆದಡೆ
ಇದೇ ಸತ್ಯ ನಾಸ್ತಿನಾಥಾ."

–ಗೊಗ್ಗವ್ವೆ

ಗೊಗ್ಗವ್ವೆ ಈ ವಚನದಲ್ಲಿ "ಗದ್ದುಗೆಯಿಲ್ಲದೆ" ಎಂದರೆ "ಅಚ್ಚ ಲಿಂಗೈಕ್ಯ ಸ್ಥಿತಿ ತಲುಪದೆ" ಎಂದರ್ಥ. "ಕೂಡಲಸಂಗನ ಶರಣರು ಅಚ್ಚ ಲಿಂಗೈಕ್ಯರು" ಎಂದು ಗುರು ಬಸವಣ್ಣನವರು ಹೇಳಿದಂತೆ 'ಗದ್ದುಗೆ' ಎಂದು (ಸಮಾಧಿ) ಸ್ಥಿತಿಯ ಉದಾಹರಣೆಯೊಂದಿಗೆ ಗೊಗ್ಗವೆಯು ವಚನವನ್ನು ವಿವರಿಸಿದ್ದಾಳೆ. ಸಮಾಧಿ ಸ್ಥಿತಿಯನ್ನು ಹೊಂದದೆ ಅತ್ಯುನ್ನತವಾದುದನ್ನು ಸಾಧಿಸಲಿಕ್ಕಾಗದು. ಅಂದರೆ ಶರಣರ ಪರಿಕಲ್ಪನೆಯ ಇಷ್ಟಲಿಂಗಾರ್ಚನೆ, ನಿತ್ಯ ಲಿಂಗತತ್ತ್ವ ನಿಯಮಗಳನ್ನು ಅನುಸರಿಸದೆ ಚಿದ್ರೂಪನಾದ ಶಿವನನ್ನು ಅರಿಯುವುದಕ್ಕೆ ಸಾಧ್ಯವಿಲ್ಲ. ಲಿಂಗಾಂಗಸಾಮರಸ್ಯವೇ ಶಿವನನ್ನು ಅರಿಯುವ ಮಾರ್ಗ. ಮನಸ್ಸಿನ ಔನತ್ಯವನ್ನು ಅನುಭಾವದ ಮೂಲಕ ಸಾಧಿಸಿದಾಗ ಮಾತ್ರ ಲಿಂಗ ಮತ್ತು ಅಂಗ ಸಮರಸ ಹೊಂದಿ ಶಿವ ಸಾಕ್ಷಾತ್ಕಾರವಾಗುವುದು ಎಂದು ಗೊಗ್ಗವ್ವೆ ಸ್ಪಷ್ಟಪಡಿಸಿದ್ದಾಳೆ. ಇದುವೆ ಸತ್ಯ. ಈ ಸತ್ಯವನ್ನು ಪರಿಪಾಲಿಸುತ್ತ ಅಸತ್ಯವನ್ನು ಮರೆತಾಗ ಆ ಪವಿತ್ರವಾದ ಬದುಕೇ ಸತ್ಯವಾದುದು ಎಂಬ ಭಾವವನ್ನು ಗೊಗ್ಗವ್ವೆಯ ನಿಲುವಾಗಿದೆ.

ಅನುಭವ ಮಂಟಪದಲ್ಲಿ ಲಿಂಗಾಂಗಸಾಮರಸ್ಯದ ಕುರಿತು ಶರಣರು ಪ್ರಸ್ತಾಪಿಸಿರುವ ವಚನಗಳು ನಮಗೆಲ್ಲ ದಾರಿದೀಪಗಳಾಗಿವೆ. ಶರಣೆ ಗೊಗ್ಗವ್ವೆಯ ವಚನದಲ್ಲಿಯೂ ಲಿಂಗ ಮತ್ತು ಅಂಗದ ಸಮ್ಮೀಲನ ಹೇಗೆಂದರೆ ವಾಯುವಿನಲ್ಲಿ ಬೆರೆತ ಸುಗಂಧದಂತೆ, ಮಿಲನದಲ್ಲಿ ಸಿಗುವ ಸುಖದಂತೆ. ತನ್ನ ಬಯಕೆಯ ಆನಂದ ದೊರಕಿದಾಗ ಅನುಭವಿಸುವ ಶಿವಭಕ್ತಿಯ ಮನಸ್ಥಿತಿಯನ್ನು ಗೊಗ್ಗವ್ವೆಯು ವಿವರಿಸುವ ವಚನವಿದು.

"ಮಾರುತದಲ್ಲಿ ಬೆರೆದ ಗಂಧದಂತೆ,
ಸುರತದಲ್ಲಿ ಬೆರೆದ ಸುಖದಂತೆ,

ಮಚ್ಚಿದಲ್ಲಿ ಕೊಡುವ ಉಚಿತದಂತೆ,
ಭಕ್ತರಿಗದೆ ಹಾದಿ ಎಂದೆ ನಾಸ್ತಿನಾಥಾ."

–ಗೊಗ್ಗವ್ವೆ

ಲಿಂಗಾಂಗ ಸಾಮರಸ್ಯ ಸುಖದ ಸೊಬಗನ್ನು ಗೊಗ್ಗವ್ವೆ ಇಲ್ಲಿ ಸೂಚಿಸಿದ್ದಾಳೆ. ಲಿಂಗಾಂಗಸಾಮರಸ್ಯದಲ್ಲಿ ಜೀವಾತ್ಮನು ಗಾಳಿಯ ಹಾಗೆ ಇದ್ದರೆ ಪರಮಾತ್ಮನು ಸುಗಂಧದ ಹಾಗೆ ಇರುತ್ತಾನೆ. ಜೀವಾತ್ಮನು ಕಾಮದಂತೆ ಇದ್ದರೆ ಪರಮಾತ್ಮನು ಪ್ರೇಮದಂತೆ ಇರುತ್ತಾನೆ. ಜೀವಾತ್ಮನು ಒಲವಾದರೆ ಪರಮಾತ್ಮನು ಸರ್ವಯೋಗ್ಯನಾಗಿರುತ್ತಾನೆ. ಹೀಗೆ ಜೀವಾತ್ಮ ಪರಮಾತ್ಮರ ಸಂಬಂಧದಿಂದ ಸಾಮರಸ್ಯವು ಸೃಷ್ಟಿಯಾಗುತ್ತದೆ. ಭಕ್ತಿಯೆಂಬುದು ಅತ್ಯಂತ ಉನ್ನತ ಪ್ರೇಮದ ಶಿಖರವಾಗಿದೆ. ಈ ಮಧುರ ಪ್ರೇಮವು ಇಡೀ ವಿಶ್ವವನ್ನೆ ಆವರಿಸಿಕೊಳ್ಳುತ್ತದೆ. ಲಿಂಗಕಾಮಿಯಾದವನು ಸಕಲಜೀವಾತ್ಮರ ಪ್ರೇಮಿಯಾಗುತ್ತಾನೆ.

ಗೊಗ್ಗವ್ವೆಯ ಮತ್ತೊಂದು ವಚನದಲ್ಲಿ ದೃಷ್ಟಾಂತ ಅಲಂಕಾರದ ಮೂಲಕ ಲಿಂಗದ ಮಹತ್ವವನ್ನು ಸಾರಿ ಹೇಳುವ ಉದ್ದೇಶದಿಂದ ಎರಡು ಉದಾಹರಣೆಗಳನ್ನು ಕೊಡುತ್ತಾಳೆ. ವಚನ ಓದುಗರಿಗೆ ಮೂರು ಪ್ರಶ್ನೆ ಹಾಕುತ್ತಾಳೆ. ಮೊದಲ ಎರಡು ಪ್ರಶ್ನೆಗಳ ಮೂಲಕ ಮೂರನೆಯ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವಂಥ ಮನಸ್ಥಿತಿಯನ್ನು ನಿರ್ಮಿಸುವಲ್ಲಿ ಸಫಲಳಾಗುತ್ತಾಳೆ. ಕೊನೆಗೆ 'ಆ ಮೂರೂ ಪ್ರಶ್ನೆಗಳು ಹುಸಿ' ಎಂಬ ಸತ್ಯದ ಪ್ರತಿಪಾದಕಳಾಗುತ್ತಾಳೆ.

"ಅನಲಕೊಂಡ ಭೋಗಕ್ಕೆ ಪರಿಪ್ರಕಾರವುಂಟೆ?
ಶರಧಿಕೊಂಡ ಸಾಗರಕ್ಕೆ ಕುರುಹಿನ ತಲೆಯೆ?
ಲಿಂಗಮುಟ್ಟಿದ ಅಂಗಕ್ಕೆ ಮತ್ತೆ ಪುಣ್ಯವುಂಟೆ?
ಹುಸಿ, ನಾಸ್ತಿನಾಥಾ."

–ಗೊಗ್ಗವ್ವೆ

ನಿಷ್ಠುರವಾದಿ ಗೊಗ್ಗವೆಯ ವಚನಗಳು ಕೂಡ ಸತ್ಯದ ನೆಲೆಯನ್ನು ಕಾಣಿಸುವುದಕ್ಕಾಗಿ ಕಠೋರವಾದ ನಿಲವಿನಿಂದ ಕೂಡಿವೆ. ಹೀಗೆ ಲಿಂಗದ ಮಹತ್ವವನ್ನು ತಿಳಿಸಿಕೊಡುವ ಅವಳ ಕ್ರಮ, ಒಳಗಿನ ಮತ್ತು ಹೊರಗಿನ

ಜಗತ್ತುಗಳನ್ನು ನಮ್ಮ ಮುಂದೆ ತಂದಿಡುವಂಥದ್ದಾಗಿದೆ. ಐಹಿಕ ಸುಖದ ಅನುಭವ ನೀಡುವ ಭೋಗ ಲಾಲಸೆ ದೃಢನಿರ್ಧಾರದ ಅಗ್ನಿಗೆ ಆಹುತಿಯಾದ ನಂತರ ಧಾವಿಸುತ್ತ ಮುಂದೆ ಬರುವ ಬೇರೆ ಪರಿಪರಿಯಾದ ಭೋಗಗಳುಂಟೆ? ಎಂಬುದು ಅವಳ ಮೊದಲ ಪ್ರಶ್ನೆಯಾಗಿದೆ. ಈ ಪ್ರಶ್ನೆ ನಮ್ಮ ಮನಸ್ಸಿನಲ್ಲಿ "ಸಾಧ್ಯವಿಲ್ಲ" ಎಂಬ ಉತ್ತರವನ್ನು ಸೃಷ್ಟಿಸುತ್ತದೆ. ಈ ಪ್ರಕಾರ ಮೊದಲ ಪ್ರಶ್ನೆಯಲ್ಲೇ ನಮ್ಮ ಮನಸ್ಸು ಚುರುಕುಗೊಂಡು ಏಕಾಗ್ರತೆಯನ್ನು ಸಾಧಿಸುತ್ತದೆ.

ಗೊಗ್ಗವ್ವೆಯ ಎರಡನೆಯ ಪ್ರಶ್ನೆ "ಶರಧಿಕೊಂಡ ಸಾಗರಕ್ಕೆ ಕುರುಹಿನ ತಲೆಯೆ?" ಎಂಬುದಾಗಿದೆ. ಈ ಮೂಲಕ ಗೊಗ್ಗವ್ವೆ ನಮ್ಮ ಮುಂದೆ ಮಹೋಪಮೆಯನ್ನೇ ಸೃಷ್ಟಿಸುತ್ತಾಳೆ. ಮಹೋಪಮೆಯಿಂದ ಕೂಡಿದ ಈ ದೃಷ್ಟಾಂತದ ಉದ್ದೇಶ, ಆಕೆಯ ಮೂರನೆಯ ಪ್ರಶ್ನೆಯ ಮಹತ್ವವನ್ನು ಮನವರಿಕೆ ಮಾಡಿಕೊಡುವುದಾಗಿದೆ. ಜಗತ್ತಿನಲ್ಲಿ ಅನೇಕ ಸಾಗರಗಳಿವೆ. ಅವುಗಳಿಗೆ ವಿವಿಧ ಹೆಸರುಗಳಿವೆ. ಆದರೆ "ಶರಧಿ" ಎಂದು ಹೇಳುವಾಗ ಸಪ್ತಸಾಗರಗಳ ಕುರುಹುಗಳು ನಾಮಾವಶೇಷ ಹೊಂದುತ್ತವೆ ಎಂದು ಗೊಗ್ಗವೆ ಸೂಚಿಸುತ್ತಾಳೆ. ಹೀಗೆ ವಿವಿಧ ಸಾಗರಗಳು ತಮ್ಮ ಹಣೆಪಟ್ಟಿಯ ಹೆಸರುಗಳನ್ನು ಕಳೆದುಕೊಂಡು ಭೂಮಿಯ ಮೇಲೆ ಶರಧಿಯಾಗಿ ಅಭೇದ್ಯವನ್ನು ಸಾಧಿಸುತ್ತವೆ.

ಲಿಂಗ ಮುಟ್ಟಿದ ಅಂಗಕ್ಕೆ ಮತ್ತೆ ಪುಣ್ಯವುಂಟೆ? ಎಂಬ ಪ್ರಶ್ನೆಗೆ ನಮ್ಮ ಮನಸ್ಸು ಉತ್ತರ ಹುಡುಕಲು ಸಾಧ್ಯವಾಗುವ ಹಾಗೆ ಮೇಲಿನ ಎರಡು ದೃಷ್ಟಾಂತಗಳನ್ನು ಕೊಟ್ಟಿದ್ದಾಳೆ. ಆ ಮೂಲಕ ನಮ್ಮ ಮನಸ್ಸನ್ನು ಸಂಸ್ಕಾರಗೊಳಿಸುತ್ತಾಳೆ. ಲಿಂಗವಂತ ಲಿಂಗಾಂಗಸಾಮರಸ್ಯವನ್ನು ಹೊಂದಿದಾಗ ಆತ ತನ್ನ ಪಂಚೇಂದ್ರಿಯಗಳ ಮೇಲೆ ಸಂಪೂರ್ಣವಾದ ವಿಜಯ ಸಾಧಿಸುವಂಥ ಮನಸ್ಥಿಯನ್ನು ತಲುಪಿರುತ್ತಾನೆ. ಆಗ ಆತನ ಅಂಗ ಪ್ರಸಾದಕಾಯವಾಗಿ ಲಿಂಗದೊಡನೆ ಸಾಮರಸ್ಯ ಹೊಂದಿದಾಗ ಅದಕ್ಕಿಂತ ಬೇರೆ ಪುಣ್ಯ ಉಂಟೆ? ಎಂದು ಆಕೆ ಪ್ರಶ್ನಿಸಿದ ಕೂಡಲೆ "ಹುಸಿ" ಎಂದು ಹೇಳುತ್ತಾಳೆ. ಗೊಗ್ಗವ್ವೆ ಅಷ್ಟು ಬೇಗ ಹೇಳಲು ಕಾರಣ, 'ನಾವು

ಅದಾಗಲೆ ದೃಷ್ಟಾಂತಗಳ ಮೂಲಕ ನಿಜದ ನಿಲವನ್ನು ಅರಿತಿದ್ದೇವೆ' ಎಂಬ ಅವಳ ದೃಢ ನಂಬಿಕೆ. ಲಿಂಗಕ್ಕೆ ಅನೇಕ ಆಯಾಮಗಳುಂಟು. ಸಾಮಾಜಿಕ ಪ್ರಜ್ಞೆ, ಸಮೂಹ ಜೀವನ, ಕಾಯಕದ ಮಹತ್ವ, ಅರ್ಥವ್ಯವಸ್ಥೆ, ಸಮತಾ ಬದುಕಿನ ಸಂಸ್ಕಾರ, ಧರ್ಮನಿಯಮ ಮುಂತಾದವು ಬಾಹ್ಯದ ಬದುಕಿನ ನೈತಿಕ ತಳಹದಿಯಾದರೆ. ಲಿಂಗಾಂಗಸಾಮರಸ್ಯವೆಂಬುದು ಆಂತರಿಕ ಬದುಕಿನ ಅನಂತ ಚೈತನ್ಯದೊಂದಿಗೆ ಒಂದಾಗುವಿಕೆಯ ಸಂಕೇತವಾಗಿದೆ. ಈ ಪ್ರಜ್ಞೆ ಇಲ್ಲದಿದ್ದರೆ ಬಾಹ್ಯ ಬದುಕಿನಲ್ಲಿ ಹೇಳಿದ್ದೆಲ್ಲವನ್ನೂ ಸಾಧಿಸಲಿಕ್ಕಾಗದು.

ಗೊಗ್ಗವ್ವೆ ತಿಳಿ ಹೇಳುವ ಈ ಕ್ರಮಕ್ಕೆ "ಸಾಕ್ರೆಟಿಸ್ ಕ್ರಮ" ಎನ್ನುತ್ತಾರೆ. ಸಾಕ್ರೆಟಿಸ್ ಎಂದು ಉತ್ತರ ಹೇಳುತ್ತಿರಲಿಲ್ಲ. ಪ್ರಶ್ನಿಸುತ್ತ ಕೇಳುಗರಿಂದಲೇ ಉತ್ತರ ಹೊರಡಿಸುತ್ತಿದ್ದ. ಕೇವಲ ಮೂರು ಪ್ರಶ್ನೆಗಳ ಮೂಲಕ ಅಗಾಧವಾದುದನ್ನು ಮನವರಿಕೆ ಮಾಡಿಕೊಡುವ ಗೊಗ್ಗವ್ವೆಯ ಕ್ರಮ ನಿಜಕ್ಕೂ ಶ್ಲಾಘನೀಯವಾಗಿದೆ.

ಹಿರಿಯ ಶರಣರಾದ ಜೇಡರದಾಸಿಮಯ್ಯನವರ ಧಾಟಿಯಲ್ಲಿಯೇ ಗೊಗ್ಗವ್ವೆಯು ತನ್ನ ಎರಡು ವಚನಗಳಲ್ಲಿ ಗಂಡು ಹೆಣ್ಣಿನ ಸಮಾನತೆಯ ಬಗೆಗೆ ಚಿಂತನೆಗೈದದ್ದು ಕಂಡುಬರುತ್ತದೆ.

"ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಮೀಸೆಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ ಹೆಣ್ಣೊ ಗಂಡೊ ನಾಸ್ತಿನಾಥಾ?"

–ಗೊಗ್ಗವ್ವೆ

ಈ ವಚನದಲ್ಲಿ ಗೊಗ್ಗವ್ವೆಯು ಜ್ಞಾನಕ್ಕೆ ಹೆಣ್ಣು ಗಂಡೆಂಬ ಭೇದವಿದೆಯೇ ಎಂದು ಪ್ರಶ್ನಿಸುತ್ತಾ ಗಂಡು-ಹೆಣ್ಣಿನ ನಡುವಿನ ಭೇದಾಭಾವವನ್ನು ಅಲ್ಲಗಳೆದು ಸಮಾನತೆಯನ್ನು ಸಾರುತ್ತಾ ಇನ್ನೂ ಸ್ವಲ್ಪ ಮುಂದುವರೆದು ಸಂಸಾರ ಜೀವನಕ್ಕೆ ಮದುವೆಯ ನಂತರ ಪಾದಾರ್ಪಣೆ ಮಾಡುವ ನವದಂಪತಿಗಳಿಗೆ ಗೊಗ್ಗವ್ವೆಯವರು ಈ ಪ್ರೇಮಿಸುವ ಕ್ರಿಯೆ, ಮೋಹಿಸುವ ಪ್ರಕ್ರಿಯೆ ಹೆಣ್ಣು- ಗಂಡಿಗೆ ಸಮಾನವಾದುದು ಎಂಬ ಆಂತರಿಕ

ಸತ್ಯವನ್ನು ಸಮಾನತೆಯ ಮೌಲ್ಯವನ್ನು ಸಾರುವ ಧೈರ್ಯಶಾಲಿ ಗೊಗ್ಗವ್ವೆ ಶರಣೆಯು ತಮ್ಮ ಈ ಮತ್ತೊಂದು ವಚನದಲ್ಲಿ ಮುಕುಟಪ್ರಾಯವಾಗಿ ಮಾರ್ಗದರ್ಶನ ಮಾಡಿಸುತ್ತಾರೆ.

"ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು.
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು."
ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ.

–ಗೊಗ್ಗವ್ವೆ

ಗೊಗ್ಗವ್ವೆಯ ಈ ಪ್ರಶ್ನೆ ಬಹಳ ಮುಖ್ಯವಾದುದು. ಗಂಡು ಒಂದು ಹೆಣ್ಣನ್ನು ಮೋಹಿಸಿದರೆ, ಆಕೆ ಅವನ ಒಡವೆಯಾಗುತ್ತಾಳೆ. ಆದರೆ ಅದೇ ಹೆಣ್ಣು ಒಂದು ಗಂಡನ್ನು ಪ್ರೀತಿಸಿದರೆ ಅವನೇಕೆ ಆಕೆಯ ಒಡವೆಯಾಗಲಾರ? ಎಂಬ ಈಕೆಯ ನೈಜ ಪ್ರಶ್ನೆಗೆ ಸಮರ್ಪಕವಾದ ಉತ್ತರ ಕೊಡಲು ಇಂದಿನ ಸಮಾಜವು ಕೂಡ ಮೌನ ತಾಳುವುದು. ಇಂಥ ಅರ್ಥಪೂರ್ಣವಾದ ವಚನ ರಚಿಸಿದ ವಚನಕಾರ್ತಿ ಸ್ತ್ರೀ–ಪುರುಷರೆಂದರೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎನ್ನುತ್ತಾಳೆ. ಹಿಂದಿನಿಂದಲೂ ಹೆಣ್ಣನ್ನು ಒಂದು ಒಡವೆಯೆಂದು ಕಾಣುತ್ತಾ ಬಂದಿದ್ದ ನಿರೂಪಿತ ಮೌಲ್ಯವನ್ನು ಧಿಕ್ಕರಿಸುವುದರ ಮೂಲಕ ಮೋಹಸುವ ಪ್ರಕ್ರಿಯೆ, ಪ್ರೇಮಿಸುವ ಕ್ರಿಯೆ ಹೆಣ್ಣು–ಗಂಡಿಗೆ ಸಮಾನವಾದುದು ಎಂಬ ಆಂತರಿಕ ಸತ್ಯವನ್ನು ಬಿಚ್ಚಿ ತೋರಿಸುತ್ತಾ ಸ್ತ್ರೀ–ಪುರುಷ ಸಮಾನತೆಯ ಕಹಳೆಯನ್ನು ಮೊಳಗಿಸುತ್ತಾಳೆ. ಹೀಗೆ ಮಧುರಭಾವದಿಂದ ಸಮಾನತೆಯನ್ನು ವಚನದ ಮೂಲಕ ಗೊಗ್ಗವ್ವೆ ತಿಳಿಸಿಕೊಟ್ಟಿದಾಳೆ.

ಮಾನವರ ಪ್ರೇಮಭಾವವು ಒಳ ಮತ್ತು ಹೊರಗಿನ ಜಗತ್ತನ್ನೆಲ್ಲ ಆವರಿಸಿಕೊಂಡು ಅತ್ಯನ್ನತ ಮಟ್ಟಕ್ಕೆ ತಲುಪಿದಾಗ ಭಕ್ತಿ ಎನಿಸಿಕೊಳ್ಳುತ್ತದೆ

ಭಕ್ತ ಮತ್ತು ಜಂಗಮರ ನಡುವಿನ ಭಿನ್ನಾಭಿಪ್ರಾಯ ಸಲ್ಲದು. ಚಲಿಸುವ ಜಂಗಮ ಧೂಪದ ಹೊಗೆಯಂತೆ, ಅದಕ್ಕೆ ನಿರ್ದಿಷ್ಟವಾದ ದಿಕ್ಕಿನಲ್ಲಿ ಸುಳಿಯಲು ಸಾಧ್ಯವಿಲ್ಲ ಎಂದು ಹೇಳುವುದು.

"ಭಕ್ತರು ಜಂಗಮದಲ್ಲಿ ಕಟ್ಟೆ ಹೋರಲೇಕೆ?
ಧೂಪದ ಹೊಗೆ ಎತ್ತ ಹೋದಡೂ ಸರಿ.
ಇದು ಸತ್ಯವೆಂದೆ ನಾಸ್ತಿನಾಥಾ."

–ಗೊಗ್ಗವ್ವೆ

ಭಕ್ತರಾದವರು ಚರಜಂಗಮದ ಸತ್ಯವನ್ನು ಅರಿಯಬೇಕು. ಗೊಗ್ಗವ್ವೆಯು ತನ್ನ ವಚನದ ಮುಖಾಂತರ ಭಕ್ತನು ಹಂತ ಹಂತವಾಗಿ ಮುನ್ನಡೆ ಸಾಧಿಸಿ ಐಕ್ಯಸ್ಥಲವನ್ನು ತಲುಪುತ್ತಾನೆ. ಈ ಪ್ರಕ್ರಿಯೆಗೆ ಬಸವಾದ್ವೈತ ಎನ್ನತ್ತಾರೆ. ಷಟಸ್ಥಲಗಳಲ್ಲಿ ಕೊನೆಯದಾದ ಐಕ್ಯಸ್ಥಲವನ್ನೂ ಮೀರಿ ಬೆಳೆದ ಶರಣ ಸಪ್ತಸ್ಥಲವಾದ ನಿರವಯ ಸ್ಥಲವನ್ನು ತಲುಪುತ್ತಾನೆ. ಇದುವೇ ಸತ್ಯ ಇದು ನಾಸ್ತಿನಾಥನನ್ನು ಸೇರುವ ಪರಿಯೆಂದು ಸಾರುತ್ತಾಳೆ.

ಕಲ್ಯಾಣದ ಆಗಸದಿ ಕರಿನೆರಳು

ಕಲ್ಯಾಣದ ಆಗಸದಿ ಕಾರ್ಮೋಡದ ಕರಿನೆರಳಿನ ಮಳೆಗರಿಯುತ್ತಿತ್ತು. ಹೊತ್ತಿ ಉರಿಯುತ್ತಿತ್ತು ಕಲ್ಯಾಣ. ಹೊತ್ತೇರುವದರೊಳಗೆ ಬೀದಿ ಬೀದಿಗಳಲ್ಲಿ ಬಿಜ್ಜಳನ ಸೈನಿಕರು ವಚನಕಟ್ಟುಗಳನ್ನು ಸುಟ್ಟು ಹಾಕುತ್ತಿದ್ದರು ಕಂಡ ಕಂಡಲ್ಲಿ ಶರಣರ ರುಂಡಗಳು ಉರುಳುತ್ತಿದ್ದವು. ಆ ರಕ್ತದ ಮಡಹು ಕಂಡ ಹೆಂಗಳೆಯರು ಎದೆ ಒಡೆದು ಜೀವಬಿಟ್ಟರೆ, ಚಿಕ್ಕ ಚಿಕ್ಕ ಮಕ್ಕಳು ಚಿಟ್ಟನೆ ಚೀರಿ ಪ್ರಾಣ ಬಿಟ್ಟವು. ಕಲ್ಯಾಣ ಕಟುಕರ ಕೇರಿಯಾಯಿತು. ಈ ಹತ್ಯಾಕಾಂಡವನ್ನು ಕಂಡು ಕಲ್ಯಾಣದ ಸುತ್ತಮುತ್ತಲಿನ ಜನವೆಲ್ಲಾ ಮಮ್ಮಲ ಮರುಗಿದರು.

ಶರಣರ ಹತ್ಯೆಯ ಸುದ್ಧಿ ತಿಳಿದು ಚನ್ನಬಸವಣ್ಣನವರು ಏಳಿ ಎದ್ದೇಳೀ ನಮ್ಮ ಉಸಿರುವವರೆಗೆ ನಾವು ವಚನಗಳನ್ನು, ಶರಣರನ್ನು ಸಂರಕ್ಷಿಸಬೇಕು. ಏನೇ ಆದರೂ ಈ ಬಸವಗಾಳಿ ಸಂಚರಿಸುವವರೆಗೆ ಬಸವ ಬಯಲಾಗುವುದಿಲ್ಲ

ಎನ್ನುತ್ತಲೇ ಕಣ್ಣೀರು ಹರಿಸತೊಡಗಿದರು, ಮತ್ತೇ ಸಮಾಧಾನದಿಂದ ತನ್ನನ್ನು ತಾನು ಸುಟ್ಟುಕೊಂಡು ಜಗಕ್ಕೆ ಬೆಳಕು ಕೊಟ್ಟ ಬಸವಣ್ಣನವರ ಬೆಳಕು ಬೆಳಗಬೇಕು. "ಶರಣ ನಿರ್ಣಯ ಎಂತೆಂದೊಡೆ ಜರವೆ ಕಪ್ಪರ, ಒಡಲೆ ಜೋಳಿಗೆ ಆಕಾಶವೇ ಹೊದಿಕೆ ಭೂಮಿಯೆ ಖಟ್ವಾಂಗ, ಸರ್ವಸಂಗ ನಿರ್ವತ್ತಿಯ ಮಾಡಿ, ಬಸವಣ್ಣ ಹೋದುದನು ಕಂಡೆ, ಕೂಡಲ ಚನ್ನಸಂಗಮದೇವಾ." ಎಂದು ಹೇಳುತ್ತಾ ಎದೆಗುಂದದೆ ಚನ್ನಬಸವಣ್ಣನವರು, ಅಕ್ಕನಾಗಮ್ಮ, ಮಡಿವಾಳಮಾಚಿದೇವ, ಅಂಬಿಗರ ಚೌಡಯ್ಯರಾದಿಯಾಗಿ ಸಭೆ ಕರೆದು, ಅಮಾಯಕ ಶರಣರು ಬಲಿಯಾಗುವುದು ಬೇಡವೆಂದು ನಿರ್ಧರಿಸಿದರು. ಮುಖ್ಯವಾಗಿ ಶರಣರನ್ನು ಹಾಗೂ ವಚನಗಳ ಕಟ್ಟುಗಳನ್ನು ರಕ್ಷಿಸಲೇಬೇಕೆಂಬ ಪಣತೊಟ್ಟರು. ಜಾಗೃತಗೊಂಡು ಒಂದಾಗಿ ಮುಂದಾಳತ್ವ ವಹಿಸಿಕೊಂಡ ಚನ್ನಬಸವಣ್ಣ, ನಾಗಲಾಂಬಿಕೆ, ಮಡಿವಾಳ ಮಾಚಿದೇವರಾದಿಯಾಗಿ ಶರಣರೆಲ್ಲರೂ ಒಡಗೂಡಿ ಮೂರು ತಂಡವಾಗಿ ಸೊಲ್ಲಾಪುರದ ಮಾರ್ಗವಾಗಿ ಮುನ್ನಡೆದರು.

ಬಸವಣ್ಣನವರಿಂದ ಕಲ್ಯಾಣ ಕೈಲಾಸವಾಯಿತು. ಬಸವಣ್ಣನೇ ಇಲ್ಲದಿರೆ, ಕಲ್ಯಾಣ ಹಾಳಾಯಿತ್ತು. ಬಸವಣ್ಣನವರೆಂದಾಗ ಈ ಭುವಿಗೆ ಧರ್ಮದ ಬೆಳಕು ಚೆಲ್ಲಿತು ಭಕ್ತಿಗೆ ಪ್ರೀತಿಯ ರೂಪ ಬಂದಿತು. ಪ್ರೀತಿಯ ಸುವಾಸನೆ ಸುತ್ತಲೆಲ್ಲಾ ಹರಡಿತು. ಸುಗಂಧ ಸವಿದ ಲಕ್ಷಾಂತರ ಜನರು, ತಮ್ಮ ಹೃದಯದಲ್ಲಿರುವ ದೈವಿಶಕ್ತಿಗೆ ಚೈತನ್ಯ ಕೊಟ್ಟರು. ಇದನ್ನು ಕಂಡು ಕೇಳಿದವರು ಆ ಭಕ್ತಿಯ ಪುಷ್ಪದ ಕಡೆಗೆ ದುಂಬಿಗಳಂತೆ ಆಕರ್ಷಿತರಾಗಿ ನಡೆದು ಬಂದರು. ದೂರದ ಊರಿಂದ ಗೊಗ್ಗವ್ವೆ, ಬೊಂತಾದೇವಿ, ಅಕ್ಕಮಹಾದೇವಿ, ದಾನಮ್ಮರಂತಹ ಅನೇಕ ಶರಣ ಶರಣೆಯರು ಬಂದು ಧರ್ಮಕಾರ್ಯಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡರು. ಬಸವಣ್ಣನವರ ಮಾತಿನಲ್ಲಿ ಎಂಥ ದಿವ್ಯತೆಯ ತೇಜವಿತ್ತೆಂಬುದನ್ನು ಶಿವಯೋಗಿ ಸಿದ್ಧರಾಮೇಶವರರ ವಚನದಿಂದ ಊಹಿಸಬಹುದು.

"ಅಯ್ಯಾ ನಿಮ್ಮ ಶರಣರಲ್ಲದವರ ಮನೆ ಕೆಮ್ಮನೆ ಕಂಡಯ್ಯಾ.
ನಿಮ್ಮ ಶರಣರ ಮನೆ ನೆರೆವನೆ ನೋಡಾ ಎನಗೆ.

ಸಿರಯಾಳ ಮನೆಗಟ್ಟಿ ಬೇರೂರಿಗೆ ಒಕ್ಕಲು ಹೋದ.
ದಾಸಿಮಯ್ಯ ಮನೆಗಟ್ಟಿ ವ್ಯವಹಾರನಾಗಿ ಹೋದ.
ಸಿಂಧುಬಲ್ಲಾಳ ಮನೆಗಟ್ಟಿ ಕೈಕೂಲಿಕಾರನಾಗಿ ಹೋದ.
ಗಂಗೆವಾಳುಕರು ಮನೆಗಟ್ಟಿ ಲಿಂಗದ ಹೊಲಬನರಿಯದೆ ಹೋದರು.
ಇವರೆಲ್ಲರು ಮನೆಯ ಮಾಡಿ ಮಹದ್ವಸ್ತುವನರಿಯದೆ,
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯವೆಂಬ
ಪದವಿಗೊಳಗಾದರು.
ನಿಮ್ಮ ಸಂಗನಬಸವಣ್ಣ ಬಂದು ಕಲ್ಯಾಣದಲ್ಲಿ ಮನೆಯ ಕಟ್ಟಿದಡೆ,
ಮರ್ತ್ಯಲೋಕವೆಲ್ಲವು ಭಕ್ತಿಸಾಮ್ರಾಜ್ಯವಾಯಿತು.
ಆ ಮನೆಗೆ ತಲೆವಾಗಿ ಹೊಕ್ಕವರೆಲ್ಲರು ನಿಜಲಿಂಗ ಫಲವ ಪಡೆದರು.
ಆ ಗೃಹವ ನೋಡಬೇಕೇಂದು ನಾನು ಹಲವು ಕಾಲ ತಪಸಿದ್ದೆನು.
ಕಪಿಲಸಿದ್ಧಮಲ್ಲಿನಾಥಾ,
ನಿಮ್ಮ ಶರಣ ಸಂಗನಬಸವಣ್ಣನ ಮಹಾಮನೆಗೆ
ನಮೋ ನಮೋ ಎಂದು ಬದುಕಿದೆನು."

–ಸಿದ್ಧರಾಮೇಶ್ವರರು

ಶಿವಯೋಗಿ ಸಿದ್ಧರಾಮೇಶ್ವರರು ಬಸವಣ್ಣನವರು ಕಲ್ಯಾಣವನ್ನು ಬಿಟ್ಟು ಹೋದ ಮೇಲೆ ಕಲ್ಯಾಣದ ಕಳೆಯಾದ ಶರಣರೇ ಇಲ್ಲದ ಮೇಲಿನ ಕಲ್ಯಾಣವೆಂಬುದೊಂದು ಕೆಮ್ಮನೆಯುಂತಾಯಿತು ಎನ್ನುತ್ತಾರೆ. ಸಂಗನಬಸವಣ್ಣನವರು ಕಲ್ಯಾಣವನ್ನು ಕೈಲಾಸವನ್ನಾಗಿ ಮಾಡಿದರು. ವಿವಿಧ ಕಡೆಯಿಂದ ಭಕ್ತಿಯಿಂದ ಬಂದವರನ್ನು ಶರಣರನ್ನಾಗಿ ಮಾಡಿದರು. ಅವರ ಮಹಾಮನೆಯಲ್ಲಿ ಲಕ್ಷಕ್ಕೂ ಮೀರಿವ ಶರಣರಿಗೆ ನಿತ್ಯ ದಾಸೋಹ ನಡೆಸಿದರು. ಆ ಮಹಾಮನೆಯೇ ಅಭೇಧ ಸಂಸ್ಕೃತಿಯನ್ನು ಬಿತ್ತರಿಸಿತ್ತು. ಜಡಕ್ಕೆ ಚೈತನ್ಯ ತುಂಬಿ, ಹೊಸ ಗಾಳಿಯನ್ನು ಹೊರಸೂಸಿತು.

ಶರಣರು ಸರ್ವಸಂಗ ಪರಿತ್ಯಾಗಿಯಾಗಿ ಅರಣ್ಯಕ್ಕಾಗಲಿ, ಕೈಲಾಸಕ್ಕಾಗಲಿ ಹೋಗಿ ಸೇರಿಕೊಳ್ಳಿರಿ ಎಂದು ಹೇಳಲಿಲ್ಲ. ಪ್ರತಿಯಾಗಿ ನೀವು ಸಮಾಜದ ಮಧ್ಯದಲ್ಲಿ ನಿಂತು ಸಮಾಜದ ದುರಿತಗಳನ್ನು ದೂರ ಮಾಡುವುದು ಕಲಿಸಿದರು. ಸಮಾಜದ ಪ್ರತಿಯೊಬ್ಬ ವ್ಯಕ್ತಿ ಸಮಾಜದ ಅಂಗ, ಪ್ರತಿಯೊಬ್ಬರ

ಯೋಗಕ್ಷೇಮ ನಿಮಗೆ ಸೇರಿದ್ದು. ಗುರುವೆಂದರೆ ಆಶೀರ್ವಾದ ಮಾಡುವವನಲ್ಲ. ಸೇವೆ ಮಾಡುವುದು. ಗುರುವೆಂದರೆ ಕಾಡಿಬೇಡಿ ತಂದು ಬದುಕುವದಲ್ಲ. ಗುರುವಾದಡು, ಜಂಗಮವಾದಡು ಕಾಯಕ ಮಾಡಲೇಬೇಕು, ಕಾಯಕ, ಪ್ರಸಾದ, ದಾಸೋಹ ಈ ಮೂರು ಲಿಂಗವಂತ ಧರ್ಮದ ಅಂಗಗಳು. ನಾವು ಬಸವಣ್ಣನವರಿಂದಲೇ ಕಲಿತೆವು, ಕಲ್ಯಾಣವಷ್ಟೇ ಅಲ್ಲ, ಇಡೀ ಜಗವನ್ನೆಲ್ಲ ಭಕ್ತಿಯ ಸಾಮ್ರಾಜ್ಯವಾಯಿತ್ತು. ಕಲ್ಯಾಣ ತೊರೆದು ಶರಣರು ಹೋದರೆಂಬುದನ್ನರಿತು ಬಸವಣ್ಣನವರ ಕೈಲಾಸವಾದ ಕಲ್ಯಾಣ ಕಣ್ಣಮುಂದೆ ಸುಳಿಯುತ್ತಿತ್ತು.

ವಿಶ್ವವೇ ದಿಗ್ಭ್ರಮೆಗೊಳ್ಳುವಂತಹ ಹತ್ಯಕಾಂಡವೆಂದರೆ ಕಲ್ಯಾಣದಲ್ಲಿ ನಡೆದ ಹತ್ಯಾಕಾಂಡವಾಗಿತ್ತು. ಅಮಾಯಕರ ಕಗ್ಗೊಲೆ ಹನ್ನೆರಡನೆಯ ಶತಮಾನದಲ್ಲಿ ನಡೆದ ಈ ಹತ್ಯಾಕಾಂಡದ ಹೆಜ್ಜೆಯಗಳನ್ನು ಗುರುತಿಸುವುದು ಅಷ್ಟು ಸುಲಭ ಸಾಧ್ಯವಲ್ಲ. ಇದಕ್ಕೆ ದೊರೆಯುವ ಆಧಾರಗಳು ಬಹಳ ವಿರಳ. ಅಳಿದುಳಿದವುಗಳನ್ನು ವಚನ ಸಾಹಿತ್ಯದಲ್ಲಿ ಆಯ್ದು ತೆಗೆದರೆ ಒಂದೆರಡು ಸಿಗಬಹುದು. ಶರಣರ ಹತ್ಯಾಕಾಂಡದ ನಂತರವು ಕೂಡ ಮೋಳಿಗೆ ಮಾರಯ್ಯನವರು ಕೆಲಕಾಲ ಕಲ್ಯಾಣದ ಸಮೀಪದಲ್ಲಿ ಇರುವ ಮೊಳಕೇರಿಯೆಂಬ ಗ್ರಾಮದಲ್ಲಿ ಇದ್ದವರು. ಅವರ ಮನದ ನೋವಿನ ಹೃದ್ರಾವಕ ಪ್ರಲಾಪವನ್ನು ಈ ವಚನದಲ್ಲಿ ನೋಡಬಹುದು.

> **"ಊರು ಕೆಟ್ಟು ಸೂರೆಯಾಡುವಲ್ಲಿ, ಆರಿಗಾರೂ ಇಲ್ಲ.**
> **ಬಸವಣ್ಣ ಸಂಗಮಕ್ಕೆ, ಚನ್ನಬಸವಣ್ಣ ಉಳುವೆಗೆ,**
> **ಪ್ರಭು ಕದಳಿಗೆ, ಮಿಕ್ಕಾದ ಪ್ರಮಥರೆಲ್ಲರೂ**
> **ತಮ್ಮ ತಮ್ಮ ಲಕ್ಷಭಾವಕ್ಕೆ ಮುಕ್ತಿಯನೆಯ್ದಿಹರು,**
> **ನನಗೊಂದು ಬಟ್ಟೆಯ ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ"**
>
> **–ಮೋಳಿಗೆ ಮಾರಯ್ಯನವರು**

ಶರಣರು ಕಲ್ಯಾಣ ತೊರೆದ ಸಂಗತಿಯನ್ನು ಮೋಳಿಗೆ ಮಾರಯ್ಯನವರು, ಇನ್ನೊಂದು ವಚನದಲ್ಲಿ ತುರುಗಾಹಿ ರಾಮಣ್ಣನವರು ಹೇಳಿರುವುದು ಕಂಡುಬರುತ್ತದೆ. ಮೋಳಿಗೆ ಮಾರಯ್ಯನವರು ಹೇಳಿದಂತೆ,

ಉಳಿದ ಲಕ್ಷೋಪಲಕ್ಷ ಶರಣರೆಲ್ಲರೂ ಎಲ್ಲೆಲ್ಲಿಗೆ ಹೋದರು ಎಂಬುದು ಎಲ್ಲಿ ಮುಕ್ತಿ ಹೊಂದಿದ್ದರು, ಎಂಬು ಕುರುಹು ಅರಿವಿಗೆ ನಿಲುಕದಾಗಿದೆ. ಶರಣರು, ಸಂತರು, ಮಹಾತ್ಮರು ತಮ್ಮ ವೈಯಕ್ತಿಕ ಜೀವನದ ಬಗ್ಗೆ ಹೇಳಿಕೊಂಡಿರುವದು ಬಹಳ ವಿರಳ. ಆದುದ್ದರಿಂದ ಶರಣರ ಐಕ್ಯಸ್ಥಳಗಳು ಸಮಾಧಿ(ಗದ್ದುಗೆ)ಗಳು ಹುಡುಕಾಡುವುದು ಕಷ್ಟಸಾಧ್ಯವೆನಿಸಿದರೂ ಪ್ರಯತ್ನಿಸಬೇಕಾಗಿದೆ. ಇತ್ತಿಚೆಗೆ ಅಲ್ಲಲ್ಲಿ ಶರಣರ ಐಕ್ಯಸ್ಥಳಗಳು ಅವರ ಗದ್ದಗೆಗಳು ಬೆಳಕಿಗೆ ಬರುತ್ತಿರುವುದು ಕಾಣಬಹುದು. ಅಂತೆಯೇ ಶರಣರು ಚಲ್ಲಾಪಿಲ್ಲಿಯಾಗುತ್ತಿರುವಾಗ ಧೂಪದ ಗೊಗ್ಗವ್ವೆಯು ಕಲ್ಯಾಣದಿಂದ ಮಹಾಗಾಂವಕ್ಕೆ ಹೋಗಿದ್ದಾರೆ ಎಂಬುದು ಕಂಡುಬರುತ್ತದೆ.

ಶರಣರು ಅಚ್ಚಲಿಂಗೈಕ್ಯರು

ಶರಣರು ಭಾವಲಿಂಗವನ್ನು ಸಮರಸ ಭಕ್ತಿಯಿಂದ ಪೂಜಿಸುತ್ತಾ, ಸದ್ಭಾವದಿಂದ ಮನವನ್ನು ಏಕಾಗ್ರತೆಯಲ್ಲಿ ನಿಲಿಸಿ, ಲಿಂಗಾಂಗ ಸಾಮರಸ್ಯದ ಅನುಭವವನ್ನು ಪಡೆದುಕೊಂಡರು. ಶರಣರ ಕರಸ್ಥಲದ ಇಷ್ಟಲಿಂಗವು ಮನಸ್ಥಲದಲ್ಲಿ ಪ್ರಾಣಲಿಂಗವಾಗಿ ಹೊಳೆಯುತ್ತದೆ. ಮನಸ್ಥಲದ ಪ್ರಾಣಲಿಂಗವೆ ಜ್ಞಾನಸ್ಥಲದ ಭಾವಲಿಂಗವಾಗಿ ಬೆಳಗುತ್ತದೆ. ಹೀಗೆ ಹಲವು ಬಗೆಯಿಂದ ಇಷ್ಟಲಿಂಗದ ದೃಷ್ಟಿಯೋಗದಿಂದ ಆರಂಭವಾದ ಶಿವಯೋಗವು ನಾನೆಂಬ ಭೇದ ಭಾವ ಅಳಿದು ಜೀವಕಾರುಣ್ಯದ ಭಕ್ತಿಭಾವದೊಳಗೆ ಲೋಕಕಲ್ಯಾಣಗೈದ ಶರಣರು ಐಕ್ಯಸ್ಥಲವ ದಾಟಿ ಬಯಲೊಳಗೆ ಬಯಲಾದರು.

"ಮೊನೆಯ ಮೇಲೆ ನೆನೆದ ನೆನಹು
ಜನನ ಮರಣವ ನಿಲಿಸಿತ್ತು, ಮನದ ಕೊನೆಯ
ಜ್ಞಾನಜ್ಯೋತಿಯ ಉದಯ ಭಾನುಕೋಟಿಯ ಮೀಜೆ,
ಸ್ವಾನುಭಾವದ ಉದಯ ಜ್ಞಾನಶೂನ್ಯದಲಡಗಿದ
ಘನವನೇನೆಂಬೆ ಗುಹೇಶ್ವರಾ."

–ಅಲ್ಲಮಪ್ರಭುದೇವರು

ಶರಣರು ಅಚ್ಚಲಿಂಗೈಕ್ಯರು. ಅವರು ಮಾತಿಗೆ ನಿಲುಕದ, ಕರಣಗಳಿಗೆ ಗೋಚರಿಸದ ಅವಸ್ಥೆಯಲ್ಲಿ ಪ್ರಜ್ವಲಿಸಿ ಹೊಳೆವುದು ಜ್ಞಾನಘನಲಿಂಗ. ಅದರ ಪ್ರಭೆ ಕೋಟಿ ಸೂರ್ಯರ ಮೀರಿದುದು. ಆದರೆ ಅದು ಅಭೌತಿಕವಾದುದು ಕಣ್ಣಿಗೆ ಕಾಣುವಂಥದಲ್ಲ. ಸಾಮಾನ್ಯ ಮನಸ್ಸಿಗೆ ಗೋಚರಿಸುವುದಿಲ್ಲ ಅದನ್ನು ಕಾಣಬೇಕಾದರೆ ಮನದಲ್ಲಡಗಿದ ಜ್ಞಾನಚಕ್ಷು ತೆರೆಯಬೇಕು. ಶರಣರು ತನ್ನ ನಿಜಸ್ವರೂಪದ ಜ್ಯೋತಿಯೊಳು ಬೆರೆತು ಮಹಾಘನವಾದರು.

ಧೂಪದ ಗೊಗ್ಗವ್ವೆಯು ತನ್ನ ಧೂಪದ ಕಾಯಕವು ಅತ್ಯಂತ ಶ್ರದ್ಧಾ, ಭಕ್ತಿ ನಿಷ್ಠೆಯಿಂದ ಮಾಡುತ್ತಾ ಮನ್ನಡೆಯುತ್ತಾಳೆ. ಮುಂದೆ ಕಲ್ಯಾಣದಲ್ಲಿನ ಕೋಲಾಹಲದಿಂದಾಗಿ ಶಿವಶರಣೆ ಗೊಗ್ಗವ್ವೆ ಕಲ್ಯಾಣದಿಂದ ಹೊರಟು ಮಹಾಗಾಂವ ಗ್ರಾಮಕ್ಕೆ ಹೋಗಿ ತನ್ನ ಧೂಪದ ಕಾಯಕವನ್ನು ಮುಂದುವರೆಸುತ್ತಾಳೆ. ಧೂಪದ ಹೊಗೆಯ ಮೂಲಕವೇ ಕೈಲಾಸಕ್ಕೆ ದಾರಿ ಎಂದು ತೋರಿಸುತ್ತಾ ನಿಷ್ಠೆಯಿಂದ ಕಾಯಕ ಮಾಡುತ್ತಾ, ಅಲ್ಲಿಯೇ ನೆಲಸುತ್ತಾಳೆ. "ಭವರಹಿತ ಧೂಪದಾ ಗೊಗ್ಗವ್ವೆಯೆಂಬಾಕೆ ಶಿವಂಗೆ ಧೂಪವ ನೀಡಿ ಕೈಲಾಸಪದವನುಂ ಶಿವಭಕ್ತರಿಗೆ ತೋರಿ ಶಂಕರನ ಕೃಪೆ ಪಡೆದಳ್" ಎಂದು ಸಿದ್ಧನಂಜೇಶ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

ಶರಣೆ ಗೊಗ್ಗವ್ವೆಯವರ ಹೆಸರು ಸಮಗ್ರ ವಚನ ಸಂಪುಟದಲ್ಲಿ ಅಜ್ಞಾತ ಶರಣರ ಸಾಲಿನಲ್ಲಿ ಬರುವ "ಸಿದ್ಧಲಿಂಗಪ್ರಿಯ ಬಸವಪ್ರಭುವೆ" ಎಂಬ ಅಂಕಿತನಾಮದಿಂದ ರಚಿಸಿದ ಒಂದು ವಚನದಲ್ಲಿ ಉಲ್ಲೇಖವಾಗಿರುವುದು ನಾವು ನೋಡಬಹುದು.

"ಬಸವಣ್ಣ ಚನ್ನಬಸವಣ್ಣ ಪ್ರಭುಸ್ವಾಮಿ
ಮಡಿವಾಳ ಮಾಚಯ್ಯ ಹಡಪದಪ್ಪಣ್ಣ
ಅಕ್ಕಮಹಾದೇವಿ ನೀಲಲೋಚನೆಯಮ್ಮ
ಗಂಗಾಂಬಿಕೆ ಅಕ್ಕನಾಗಲಿ ಮುಕ್ತಾಯಕ್ಕ
ನಿಂಬೆಕ್ಕ ಚೋಳವ್ವೆ ಅಮ್ಮವ್ವೆ ಆದವ್ವೆ
ಕೋಳೂರು ಕೊಡಗೂಸಮ್ಮೆ ಗೊಗ್ಗವ್ವೆ ದುಗ್ಗಳವ್ವೆ

ಸುಗ್ಗಳವ್ವೆಯರ ಪಾದರಕ್ಷೆಯೊಳಗೆ
ಐಕ್ಯಪದವೀಯಯ್ಯ ಸಿದ್ಧಲಿಂಗಪ್ರಿಯ ಬಸವಪ್ರಭುವೆ"
-ಸಿದ್ಧಲಿಂಗಪ್ರಿಯ ಬಸವಪ್ರಭುವೆ.

ಗೊಗ್ಗವ್ವೆಯವರ ಐಕ್ಯಸ್ಥಳ

ಬೀದರ ಜಿಲ್ಲೆ ಔರಾದ ತಾಲ್ಲೂಕಿನಲ್ಲಿ ಬರುವ ಧೂಪದ ಮಹಾಗಾಂವ ಗ್ರಾಮವು ಬೀದರದಿಂದ ೩೦ ಕಿ.ಮೀ ದೂರದಲ್ಲಿ ಬರುವ ಔರಾದ (ಬಿ) ದಿಂದ ೨೨ ಕಿ.ಮೀ ದೂರದಲ್ಲಿರುವ ಆಗಿನ ಈ ಮಹಾಗಾಂವ ಗ್ರಾಮಕ್ಕೆ ಗೊಗ್ಗವ್ವೆಯು ಬಂದು ನೆಲೆಸಿ ಧೂಪದ ಕಾಯಕವನ್ನು ಮಾಡುತ್ತಿದ್ದರಿಂದ ಆ ಊರ ಹೆಸರಿನ ಹಿಂದೆ ಧೂಪದ ಎಂಬ ಪದ ಸೇರಿಕೊಂಡು 'ಧೂಪದ ಮಹಾಗಾಂವ' ಎಂದೆ ಬಳಕೆಯಲ್ಲಿ ಬಂತು ಎಂದು ಹೇಳುತ್ತಾರೆ. ಆ ಧೂಪದ ಮಹಾಗಾಂವ ಎಂಬ ಗ್ರಾಮದ ಹೊರವಲಯದ ಕೆರೆಯ ದಂಡೆಯ ಮೇಲೆ ಕುಳಿತು ಗೊಗ್ಗವ್ವೆಯು ತನ್ನ ಧೂಪದ ಕಾಯಕವನ್ನು ಇಷ್ಟಲಿಂಗಯ್ಯನಿಗೆ ಸಲ್ಲಿಸುತ್ತಾ, ಅಂಗೈಯಲ್ಲಿ ಲಿಂಗಯ್ಯನ ಹಿಡಿದುಕೊಂಡು ಧ್ಯಾನದಲ್ಲಿ ಮನಮಗ್ನಳಾಗಿ "ನಾಸ್ತಿನಾಥನಲ್ಲಿ" ಒಡವೆರೆದು ಒಂದಾಗಿ ಐಕ್ಯವಾಗುತ್ತಾಳೆ.

ಗೊಗ್ಗವ್ವೆಯ ಐಕ್ಯಸ್ಥಳದಲ್ಲಿ ಇತ್ತಿಚೆಗೆ ಚಿಕ್ಕದಾದ ದೇವಾಲಯವನ್ನು ನಿರ್ಮಿಸಲಾಗಿದೆ. ಆ ದೇವಾಲಯದ ಗರ್ಭಗುಡಿಯಲ್ಲಿ ಯಾವುದೇ ತರಹದ ಮೂರ್ತಿಗಳು ಇಲ್ಲ. ಒಂದು ಚೌಕಾಕಾರದ ಕರಿಯ ಕಲ್ಲು ಮಾತ್ರ ಸ್ಥಾಪನೆಗೊಂಡಿದೆ. ಅಲ್ಲಿಯೇ ಒಂದು ಸುರಂಗ ಮಾರ್ಗವಿದೆ ಎನ್ನಲಾಗುತ್ತದೆ. ಆ ಮಾರ್ಗವು ಮಗ್ಗುಲಲ್ಲೇ ಇರುವ ಕೆರೆಯವರೆಗೆ ಇದೆ, ಗೊಗ್ಗವ್ವೆಯು ಇಷ್ಟಲಿಂಗ ಪೂಜೆಗಾಗಿ ಸುರಂಗ ಮಾರ್ಗದಿಂದ ಹೋಗಿ ನೀರು ತರುತ್ತಿದ್ದರು ಎನ್ನುತ್ತಾರೆ. ದೇವಾಲಯದ ಮುಂಭಾಗದಲ್ಲಿ ಧೂಪ ಹಾಕುವ ಅಗಿಷ್ಟಿಕೆ ಮಾಡಿದ್ದಾರೆ.

ಗೊಗ್ಗವ್ವೆಯ ಗದ್ದುಗೆಗೆ ನಿತ್ಯ ಪೂಜೆ ನಡೆಯುತ್ತದೆ. ಆದರೆ ಆ ಗದ್ದುಗೆಯ (ಸಮಾಧಿ) ವಿಶೇಷತೆ ಏನೆಂದರೆ ಇಂದಿಗೂ ಗೊಗ್ಗವ್ವೆಯ

ಐಕ್ಯಸ್ಥಳದ ಮೇಲಿರುವ ಚೌಕಾಕಾರದ ಕರಿಯ ಕಲ್ಲಿಗೆ ಕುಂಕುಮ, ಅರಿಸಿನದಂಥ ಯಾವುದೇ ತರಹದ ಅಲಂಕಾರ ಮಾಡುವುದಿಲ್ಲ. ಕೇವಲ ವಿಭೂತಿಯಿಂದ ಅಲಂಕಾರ, ಪೂಜೆ ಮಾಡುತ್ತಾರೆ.

ಧೂಪದಮಹಾಗಾಂವ ಗ್ರಾಮದಲ್ಲಿ ಯಾವುದೇ ಮನೆಯಲ್ಲಿ ಶುಭಕಾರ್ಯಗಳು, ಅಂದರೆ ಮದುವೆ ಇತ್ಯಾದಿಯಾಗಿ ಯಾವುದೇ ಸಣ್ಣ ಪುಟ್ಟ ಕಾರ್ಯಕ್ರಮಗಳು ನಡೆಸಬೇಕಾಗಿದ್ದರೂ, ಮೊದಲು ಗೊಗ್ಗವ್ವೆಯರ ದೇವಾಲಯದ ಮುಂದಿನ ಮೈದಾನದಲ್ಲಿರುವ ಅಗ್ಗಷ್ಟಿಕೆಯಲ್ಲಿ ಧೂಪ ಹಾಕಿದ ನಂತರವೇ ಅವರ ಮುಂದಿನ ಕಾರ್ಯಗಳೂ ಜರಗುತ್ತವೆ. ಮತ್ತೊಂದು ವಿಶೇಷತೆಯೆಂದರೆ ಈ ಅಗ್ಗಷ್ಟಿಕೆಯಲ್ಲಿ ಧೂಪದೀಪ ಹಾಕುವವರಿಗೆ ಜಾತಿ, ಧರ್ಮಗಳ ಮತ್ತು ಹೆಣ್ಣು ಗಂಡೆಂಬ ಯಾವುದೇ ಭೇದ ಭಾವ ಮಾಡವಂತಿಲ್ಲ. ಎಲ್ಲರೂ ಒಂದೇ ಎಂಬ ಭಾವದಿಂದ ಗೊಗ್ಗವ್ವೆಯವರ ಗುಡಿಯ ಮುಂದೆ ಭಕ್ತಿಶ್ರದ್ಧೆಯಿಂದ ಬಂದು ಧೂಪ ಹಾಕಿದ ನಂತರವೆ ಮುಂದಿನ ಕಾರ್ಯಗಳು ನಡೆಸುವ ಪದ್ಧತಿಯಿದೆ ಎನ್ನುತ್ತಾರೆ.

ಗ್ರಾಮದ ಜನರು ಗೊಗ್ಗವ್ವೆ ಒಬ್ಬ ಶರಣಮ್ಮ ಇದ್ದಳಂತೆ ಅದಕ್ಕೆ ಅವಳ ಗದ್ದುಗಿಗೆ ಕುಂಕುಮ ನಡೆಯುದಿಲ್ಲಂತೆ ನಮ್ಮ ಹಿಂದಿನ ಹಿರಿಯರು ಹೇಳತ್ತಾ ಬಂದಿದ್ದಾರೆ. ಅದಕ್ಕಾಗಿ ನಾವು ದಿನಾ ವಿಭೂತಿನೆ ಹಚ್ಚಿ ಪೂಜೆ ಮಾಡುತ್ತೇವೆ ಎನ್ನುತ್ತಾರೆ. ಗೊಗ್ಗವ್ವೆ ಅಂದ್ರೆ ಸುಮ್ಮನೆ ಅಲ್ಲರ್ರಿ ತುಂಬಾ ಭಕ್ತಿಭಾವ ಇದ್ದವಳು, ಆ ಸಮಾಧಿಯ ಕಲ್ಲು ಸರಸುವುದಕ್ಕೂ ಬಿಡೋಲ್ಲ, ಬಹಳ ಶಕ್ತಿವುಳ್ಳವಳು. ಒಮ್ಮೆ ಗರ್ಭಗುಡಿಯಲ್ಲಿ ಇರುವ ಕಲ್ಲು ತೆಗೆದು ಮೂರ್ತಿ ಕುಡಿಸಬೇಕೆಂದು ಹೋದಾಗ ಆ ಕಲ್ಲು ಎಷ್ಟು ಪ್ರಯತ್ನಿಸಿದರೂ ಅಲ್ಲಗಾಡಲಿಲ್ಲವಂತೆ, ಎನ್ನುತ್ತಾ ತಮ್ಮ ತಮ್ಮ ಕೆಲವು ಆಚರಣೆಗಳು ಹೇಗೆ ಮಾಡುತ್ತೇವೆ ಎಂಬುದನ್ನು ಊರಿನ ಜನ ಹಂಚಿಕೊಳ್ಳುತ್ತಾರೆ. ಹರಕೆ ಹೊತ್ತು, ಗ್ರಾಮದ ಜನ ಉಡಿತುಂಬುವ ವಿಶೇಷ ಕಾರ್ಯಕ್ರಮವೆಂದು ಹೇಳುತ್ತಾ, ಬಿಳಿ ಸೀರೆ, ಬಿಳಿ ಕುಪ್ಪಸ, ಬಳೆಗಳೊಂದಿಗೆ ಮುತ್ತೈದೆಯರು ಬಂದು ಉಡಿತುಂಬುವ ಕಾರ್ಯಕ್ರಮವನ್ನು ನೆರವೇರಿಸುತ್ತಾರೆ. ಇದಲ್ಲದೆ

ಮಕ್ಕಳ ಜಡೆ ತೆಗೆಯುವದು, ಧಿರ್ಘದಂಡ ನಮಸ್ಕಾರ ಹಾಕುವದು, ಗೂಳಿಗಳನ್ನೂ ಬಿಡುವುದು ಮಾಡುತ್ತಾರೆ. ಆದರೆ ಮದುವೆ ಕಾರ್ಯಕ್ರಮ ಗೊಗ್ಗವ್ವೆಯ ದೇವಾಲಯದಲ್ಲಿ ನಡೆಯುವುದಿಲ್ಲ.

ಧೂಪದಮಹಾಗಾಂವ ಗ್ರಾಮಕ್ಕೆ ಹೋಗಿ ಅಲ್ಲಿಯ ಹಿರಿಯರಿಗೆ ಭೇಟಿಯಾಗಿ ಕೇಳಿದರೆ, ಗೊಗ್ಗವ್ವೆ ಬಸವಣ್ಣನವರ ಕಾಲದವಳು ಎಂದು ನಮಗೆ ಗೊತ್ತೆ ಇರಲಿಲ್ಲ. ಅವಳೊಬ್ಬ ಮಹಾನ್ ಶಿವಶರಣೆಯೆಂದು ಕೂಡ ಗೊತ್ತಿರಲಿಲ್ಲ. ಇತ್ತಿಚೆಗೆ ಯಾವಾಗೋ ಒಬ್ಬರೊಬ್ಬರು ಹಿಂಗೆ ಬಂದು ಹೇಳಿ ಹೋಗುತ್ತಾರೆ. ಅವಳ ವಚನಗಳ ಬಗ್ಗೆಯೂ ನಮ್ಮೂರಿನ ಜನಗಳಿಗೆ ಯಾವುದೇ ಮಾಹಿತಿಯಿರಲಿಲ್ಲ ಎನ್ನುತ್ತಾರೆ.

ಪ್ರತಿವರ್ಷ ಜನವರಿಯಲ್ಲಿ ಪಲ್ಲಕ್ಕಿ ಉತ್ಸವ ನಡೆಸುತ್ತೇವೆ. ದೀಪಾವಳಿ ನಂತರ ಬರುವ ಹುಣ್ಣಿಮೆಯಂದು ಖಾಂಡ ಎಂದು ಮಾಡುತ್ತೇವೆ. ಈ ಗೊಗ್ಗವ್ವೆತಾಯಿಯು ಒಬ್ಬ ಶಕ್ತಿದೇವತೆ ಎಂದು ನಮ್ಮ ಊರಿನ ಜನರೆಲ್ಲಾ ತುಂಬಾ ಭಕ್ತಿ ಶ್ರದ್ಧೆಯಿಂದ ನಡೆದುಕೊಳ್ಳುತ್ತಾರೆ. ಯಾವ್ಯಾವದೊ ಮೂಢನಂಬಿಕೆನೊ ಏನೋ ನಡಕೊಂಡು ಬರ್ತಾ ಇದ್ದವೆ ನೋಡಿ ಎನ್ನುತ್ತಾರೆ. ಶರಣೆ ಗೊಗ್ಗವ್ವೆಯವರ ಗದ್ದುಗೆಯ ವಿಶೇಷತೆ ಕುರಿತು ಊರಿನ ಜನರು ತಮ್ಮ ತಮ್ಮ ಅನುಭವವನ್ನು ಹಂಚಿಕೊಂಡರು. ಗೊಗ್ಗವ್ವೆಗೆ ವಿಶೇಷವಾಗಿ ನಡೆದುಕೊಳ್ಳುವ ಹುಲೆಪ್ಪನವರ ಎಂಬ ಮನೆತನದ ಹೆಣ್ಣುಮಕ್ಕಳು ಸೋಮವಾರಕ್ಕೊಮ್ಮೆ ಅಲ್ಲಿಗೆ ಬಂದು ವಿಶೇಷ ಪೂಜೆ ಸಲ್ಲಿಸುತ್ತಾರೆ. ಶ್ರಾವಣ ಮಾಸದಲ್ಲಿ ಪ್ರತಿನಿತ್ಯ ಈ ಮನೆಯವರಿಂದಲೇ ಪೂಜೆ ನಡೆಯುತ್ತದೆ. ಇವರುಗಳು ಗೊಗ್ಗವ್ವೆಯ ಭಕ್ತರಾದಿದ್ದರಿಂದ ಮನೆಯಲ್ಲಿ ದಸರಾ ಹಬ್ಬಕ್ಕೆ ಘಟಸ್ಥಾಪನೆ ಮಾಡುವುದಿಲ್ಲ. ಗಣಪತಿ ಕೂಡಿಸುವುದು, ಲಕ್ಷ್ಮಿ ಕೂಡಿಸುವುದು, ಮಣ್ಣೆತ್ತಿನ ಪೂಜೆ, ಹೀಗೆ ಒಟ್ಟಿನಲ್ಲಿ ಹೇಳಬೇಕಾದರೆ ಧೂಪದ ಗೊಗ್ಗವ್ವೆಯ ಶರಣತತ್ತ್ವವಾದ ಏಕದೇವೋಪಾಸನೆ ಎಂಬುದು ಹಿಂದಿನಿಂದ ನಡೆಯುತ್ತಿತ್ತು ಎಂದು ಹೇಳಬಹುದು.

ಆದರೆ ಧೂಪದಮಹಾಗಾಂವ ಗ್ರಾಮದ ಹಿರಿಯರಾಗಿದ್ದ ಲಿಂಗೈಕ್ಯ ಶ್ರೀ ಬಸವರಾಜ ಬಿರಾದರ ನಿವೃತ್ತ ಶಿಕ್ಷಕರು ಗೊಗ್ಗವ್ವೆ ಶರಣಮ್ಮ ನಮ್ಮ

ಮನೆತನದ ದೇವತೆ, ಅವಳು ಇಷ್ಟಲಿಂಗ ಪೂಜೆ ಬಿಟ್ಟು ಬೇರೆ ಏನು ಮಾಡುತ್ತಿರಲಿಲ್ಲವಂತೆ ಹಾಗಾಗಿ ನಮ್ಮ ಮನೆತನದಲ್ಲಿ ಯಾವ ಪೂಜೆಗೂ ಅವಕಾಶವಿರಲಿಲ್ಲ. ಅದಕ್ಕೆ ನಮ್ಮ ಮನೆಯಲ್ಲಿ ಬೇರೆ ಯಾವ ದೇವ ದೇವತೆಗಳ ಪೂಜೆ ನಡೆಯುವುದಿಲ್ಲ ಎಂದು ತಮ್ಮ ತಂದೆಯವರು ಅವರ ಹಿರಿಯರು ನಡೆದುಕೊಂಡ ಬಂದದ್ದನ್ನು ಹೇಳುತ್ತಿದ್ದರು. ನಾವು ನಮ್ಮ ವಯಸ್ಸಾಗತ್ತಾ ಬಂದರೂ ಗೊಗ್ಗವ್ವೆ ತಾಯಿಯನ್ನು ಬಿಟ್ಟು ಏನು ಬೇರೆ ದೇವರ ಪೂಜೆ ಮಾಡಿಲ್ಲ. ಆದರೇನು ಮಾಡೋದು ಈಗಿನವರು ಎಲ್ಲೆಲ್ಲಿಂದಲೋ ಆಚರಣೆಗಳು ತಂದು ಮಾಡುತ್ತಾರೆ ಓದು ಬರೆದವರು ವಿದ್ಯಾವಂತರೆನಿಸಿ ಕೊಂಡವರು ಕೂಡ ಇಷ್ಟಲಿಂಗದ ಮಹತ್ವ ತಿಳಿದುಕೊಳ್ಳುವುದಕ್ಕೆ ಮುಂದಾಗುತ್ತಿಲ್ಲ. ಅವರಿಗೆಲ್ಲ ಶರಣರ ಮಹತ್ವವನ್ನು ಹೇಗೆ ತಿಳಿಸಬೇಕೊ ಎಂಬುದೇ ನನಗೆ ಅರ್ಥವಾಗುತ್ತಿಲ್ಲ ಎಂದು ಅತ್ಯಂತ ಕಳಕಳಿಯ ನುಡಿಗಳು ವ್ಯಕ್ತಪಡಿಸಿದ್ದರು.

ಗೊಗ್ಗವ್ವೆಯ ದೇವಾಲಯದ ಮಗ್ಗುಲಲ್ಲಿ ಇರುವ ಕೆರೆಯನ್ನು ನಾವು ನೋಡಿದಾಗ ಕೆರೆಯೆಲ್ಲಾ ಹೂಳು ತುಂಬಿ ನಡುವಲ್ಲಿ ಸ್ವಲವೇ ಸ್ವಲ್ಪ ನೀರು ನಿಂತಿತ್ತು. ಎಂದೂ ಬತ್ತದ ಕೆರೆಯೆಂದೆ ಹೆಸರಾಗಿದ್ದ ಕೆರೆಯು ಪಾಳು ಬೀಳುವ ಸ್ಥಿತಿಯಲ್ಲಿತ್ತು. ಗೊಗ್ಗವ್ವೆಯ ಐಕ್ಯಸ್ಥಳದ ಕಿರುಚಿತ್ರ ಮಾಡಿದ್ದೆವು. ಬಸವ ಟಿ. ವಿ. ಯಲ್ಲಿ ಪ್ರಸಾರ ಕೂಡ ಆಗಿತ್ತು. ಶರಣಮಾರ್ಗ ಮಾಸಪತ್ರಿಕೆಗೆ ಗೊಗ್ಗವ್ವೆಯವರ ಬಗ್ಗೆ ಲೇಖನ ಬರೆದು ಕಳಿಸಿದಾಗ ಅವರು ಅದನ್ನು ಮುದ್ರಿಸಿದ್ದರು. ಹೀಗೆ ನಾವೆಲ್ಲರೂ ಗೊಗ್ಗವ್ವೆಯ ಐಕ್ಯಸ್ಥಳದ ಬಗ್ಗೆ ಕೇಳುತ್ತಾ ಓಡಾಡುತ್ತಿರುವದು ನೋಡಿದರು. ತಮ್ಮ ಗ್ರಾಮದಲ್ಲಿ ಬಸವಣ್ಣನವರ ಸಮಕಾಲೀನರಾದ ಶರಣೆ ಗೊಗ್ಗವ್ವೆಯವರ ಐಕ್ಯಮಂಟಪದ ಮಗ್ಗುಲಲ್ಲಿ ಬತ್ತದೆ ಇರುವ ಕೆರೆಯು ಈಗ ಅವನತಿ ಕಾಣುವ ಸ್ಥಿತಿಯಲ್ಲಿಯಿದೆ ಎಂಬುದನ್ನು ಗ್ರಾಮದ ಜನರು ಗಮನಿಸಿದರು.

ಇತ್ತಿಚೆಗೆ ಧೂಪದಮಹಾಗಾಂವ ಗ್ರಾಮದ ಮುಖಂಡರೆಲ್ಲರೂ ಸೇರಿಕೊಂಡು ಸಚಿವರಿಗೆ ಭೇಟಿಯಾಗಿ, ತಮ್ಮೂರಿನಲ್ಲಿ ಇರುವ ಮಹಾಶರಣೆಯ ಸ್ಥಳದ ಬಗ್ಗೆ ತಿಳಿಸಿದರು. ಕೂಡಲೆ ಸಚಿವರ ಸಹಾಯದಿಂದ ಆ ಬತ್ತುತ್ತಿರುವ ಕೆರೆಯ ಹೂಳನ್ನು ತೆಗೆಯಿಸಿ, ಸ್ವಚ್ಛ ಸುಂದರವಾಗಿ,

ಭವ್ಯವಾದ ಕೆರೆಯನ್ನು ನಿರ್ಮಿಸಿರುವುದು ಸಂತೋಷದ ಸಂಗತಿಯಾಗಿದೆ. ಹೀಗೆ ಸರ್ಕಾರದವರು ಅವನತಿಯ ಸ್ಥಿತಿಯಲ್ಲಿರುವ ಶರಣರ ಸ್ಥಳಗಳ ಕಡೆಗೆ ಗಮನ ಹರಿಸುವುದು ಅತ್ಯಂತ ಅವಶ್ಯಕವಾಗಿದೆ.

ಅನುಬಂಧ

ಆಧಾರ ಗ್ರಂಥಗಳು

೧) ಸಮಗ್ರ ವಚನ ಸಾಹಿತ್ಯ ಸಂಪುಟಗಳು : ಪ್ರಧಾನ ಸಂಪಾದಕರು, ಡಾ. ಎಂ. ಎಂ. ಕಲಬುರ್ಗಿ.

೨) ಶಿವಶರಣೆಯರ ವಚನ ಸಂಪುಟ, ೫) : ಸಂಪಾದಕರು, ವೀರಣ್ಣರಾಜೂರ.

೩) ಶೂನ್ಯ ಸಂಪಾದನೆಯ ಪರಾಮರ್ಶೆ : ಪ್ರೊ. ಸಂ.ಶಿ. ಭೂಸನೂರಮಠ.

೪) ಕಾಯಕ ಪರಿಣಾಮಿ, ಚೆನ್ನಬಸವ ಪಟ್ಟದ್ದೇವರು ಭಾಲ್ಕಿ ಗೌರವ ಗ್ರಂಥ: ಪ್ರಧಾನ ಸಂಪಾದಕರು, ಶಾಂತರಸ ರಾಯಚೂರು, ಚೆನ್ನಬಸವಪ್ಪ ಬೆಟ್ಟದೂರು.

೫) ಶಿವಶರಣೆಯರ ಚರಿತ್ರೆಗಳು : ಡಾ. ಫ. ಗು. ಹಳಕಟ್ಟಿ

೬) ಕನ್ನಡ ಜನಪದ ಗೀತೆಗಳು : ಡಾ. ಬಿ. ಎಸ್. ಗದ್ದಗಿಮಠ.

೭) ಬಸವೇಶ್ವರರ ಸಮಕಾಲೀನರು : ಬಸವ ಸಮಿತಿ ಬೆಂಗಳೂರು.

೮) ಯುಗಾವತಾರಿ, ಶ್ರೀ ಬಸವ ದರ್ಶನ ಕಾವ್ಯ: ಡಾ. ಪ್ರದೀಪಕುಮಾರ ಹೆಬ್ರಿ

೯) ಹಾಳಾಯಿತ್ತು ಕಲ್ಯಾಣ : ಎಂ.ಎಸ್. ಸಿಂಧೂರ

೧೦) ವೀರಶರಣೆ ಗುಡ್ಡಾಪುರ ದಾನಮ್ಮ: ಶ್ರೀಮತಿ ಜಯಶ್ರೀ ಸುಕಾಲೆ.

೧೧) ವಚನ ಬೆಳಕು : ಶ್ರೀ ರಂಜಾನ ದರ್ಗಾ

೧೨) (ಗೂಳೂರು ಸಿದ್ಧವೀರಣ್ಣೊಡೆಯರು ರಚಿಸಿದ ಪ್ರಭುದೇವರ) ಶೂನ್ಯ ಸಂಪಾದನೆ: ಸಂಪಾದಕರು, ಡಾ. ಎಂ.ಎಂ. ಕಲಬುರ್ಗಿ, ಡಾ. ವೀರಣ್ಣ

ಪ್ರಸಾರಾಂಗ ಲಿಂಗಾಯತ ವಿಶ್ವವಿದ್ಯಾಲಯ

ಅನುಭವ ಮಂಟಪ, ಬಸವಕಲ್ಯಾಣ, ಜಿಲ್ಲೆ : ಬೀದರ

ಪ್ರಕಟಣೆಯಾದ ಪುಸ್ತಕಗಳು

೧. ಅನನ್ಯ ಅನುಭವ ಮಂಟಪ (ಸ್ಮರಣ ಸಂಚಿಕೆ) (೨೦೧೫)
- ಸಂ.ಡಾ.ಸೋಮನಾಥ ಯಾಳವಾರ

೨. ಜಗತ್ತಿನ ಪ್ರಪ್ರಥಮ ಸಂಸತ್ತು ಅನುಭವ ಮಂಟಪ (ಸ್ಮರಣ ಸಂಚಿಕೆ) (೨೦೧೬)
- ಸಂ.ಡಾ.ಸೋಮನಾಥ ಯಾಳವಾರ

೩. ವ್ಯೋಮಮೂರುತಿ ಅಲ್ಲಮಪ್ರಭುದೇವರು (೨೦೧೬) ೦೧
- ಲೇ.ಡಾ.ಪ್ರದೀಪಕುಮಾರ ಹೆಬ್ರಿ

೪. ಧರ್ಮಪಿತ ವಿಶ್ವಗುರು ಬಸವಣ್ಣ (೨೦೧೬) ೦೨
- ಲೇ.ಪ್ರೊ.ಸಿದ್ಧಣ್ಣ ಲಂಗೋಟಿ

೫. ವಿಚಾರಪತ್ನಿ ನೀಲಮ್ಮ (೨೦೧೬) ೦೩
- ಲೇ.ಡಾ.ಕಲ್ಯಾಣಮ್ಮ ಸಿ.ಲಂಗೋಟಿ

೬. ಮಹಾಜ್ಞಾನಿ ಚೆನ್ನಬಸವಣ್ಣನವರು (೨೦೧೬) ೦೪
- ಲೇ.ಡಾ.ಸೋಮನಾಥ ಯಾಳವಾರ

೭. ವೀರವೈರಾಗ್ಯನಿಧಿ ಅಕ್ಕಮಹಾದೇವಿ (೨೦೧೬) ೦೫
- ಲೇ.ವಿಜಯಲಕ್ಷ್ಮೀ ಕೌಟಗೆ

೮. ಲಿಂಗಾಯತಂ ಭೋ ಸ್ವತಂತ್ರಶೀಲ (ಸ್ಮರಣ ಸಂಚಿಕೆ)(೨೦೧೭)
- ಸಂ.ಡಾ.ಸೋಮನಾಥ ಯಾಳವಾರ

೯. ಶರಣ ಹಡಪದ ಅಪ್ಪಣ್ಣ (೨೦೧೭) ೦೬
- ಲೇ.ಡಾ.ಆರ್.ಬಿ.ಚಿಲುಮಿ

೧೦. ಶರಣೆ ಸತ್ಯಕ್ಕ (೨೦೧೭) ೦೭
- ಲೇ.ಪ್ರೊ.ಬಾಲಚಂದ್ರ ಜಯಶೆಟ್ಟಿ

೧೧. ಶರಣ ಹೂಗಾರ ಮಾದಣ್ಣ (೨೦೧೭) ೦೮
- ಲೇ.ಡಾ.ಸೋಮನಾಥ ಯಾಳವಾರ

■■

ಭವರಹಿತ ಧೂಪದ ಗೊಗ್ಗವ್ವೆ







"ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು.
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು."
ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ.,

–ಗೊಗ್ಗವ್ವೆಯವರು

ಪ್ರಕಾಶಕರು
ಪ್ರಸಾರಾಂಗ ಲಿಂಗಾಯತ ವಿಶ್ವವಿದ್ಯಾಲಯ
ಅನುಭವಮಂಟಪ ಬಸವಕಲ್ಯಾಣ, ಜಿಲ್ಲೆ. ಬೀದರ